ಸಂಪುಟ 01 | ಸಂಚಿಕೆ 83 | ಗುರುವಾರ 05 ಫೆಬ್ರವರಿ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ರಾಷ್ಟ್ರೀಯ ಹವಾಮಾನ ವ್ಯಕ್ತಿಗಳ ದಿನ

ಫೆಬ್ರವರಿ 5 ರಂದು ಯಾವಾಗಲೂ ಆಚರಿಸಲಾಗುವ ರಾಷ್ಟ್ರೀಯ ಹವಾಮಾನ ವ್ಯಕ್ತಿಗಳ ದಿನ (ರಾಷ್ಟ್ರೀಯ ಹವಾಮಾನ ವ್ಯಕ್ತಿಗಳ ದಿನ ಎಂದೂ ಕರೆಯುತ್ತಾರೆ) ಹವಾಮಾನಶಾಸ್ತ್ರ, ಹವಾಮಾನ ಮುನ್ಸೂಚನೆ ಮತ್ತು ಪ್ರಸಾರ ಹವಾಮಾನಶಾಸ್ತ್ರದಲ್ಲಿ ಕೆಲಸ ಮಾಡುವ ಎಲ್ಲ ವ್ಯಕ್ತಿಗಳನ್ನು ಗೌರವಿಸುತ್ತದೆ. ಈ ದಿನವು ಸ್ವಯಂಸೇವಕ ಚಂಡಮಾರುತ ಪತ್ತೆದಾರರು, ವೀಕ್ಷಕರು ಮತ್ತು ಹವಾಮಾನ ಕ್ಷೇತ್ರದಲ್ಲಿ ಕೆಲಸ ಮಾಡುವ ಇತರರನ್ನು ಸಹ ಗುರುತಿಸುತ್ತದೆ.

## ಸುಭಾಷಿತ

ನಮ್ಮ ಸಾಧನೆ ಒಂದು ಬಿತ್ತನೆಯ ಬೀಜವಾದರೆ, ಅದರ ಪ್ರತಿಫಲವಾಗಿರುವ ಸಿದ್ಧಿಯು ಒಂದು ಮರವಾಗಿರುತ್ತದೆ.

ಮಹಾತ್ಮ ಗಾಂಧೀಜಿ

## ಫೆ.5ರಂದು ಕೃಷಿ ವಿಶ್ವವಿದ್ಯಾಲಯದ ಮುಖ್ಯ ವೇದಿಕೆಯಲ್ಲಿ ಫೈರ್ ಶೋ, ಸಂಜೆ 7ರಿಂದ ನೃತ್ಯ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ 2026ರ ಅಂಗವಾಗಿ ಫೆ.05ರಂದು ಕೃಷಿ ವಿಶ್ವವಿದ್ಯಾಲಯದ ಮುಖ್ಯ ವೇದಿಕೆಯಲ್ಲಿ ಸಂಜೆ 5.30ಕ್ಕೆ ಮುಖ್ಯ ವೇದಿಕೆಯ ಉದ್ಘಾಟನಾ ಸಮಾರಂಭದಲ್ಲಿ ಜಿಲ್ಲಾವಾರು ಶ್ರೇಷ್ಠ ಕೃಷಿಕ, ಕೃಷಿಕ ಮಹಿಳೆ ಪ್ರಶಸ್ತಿ ವಿಜೇತರಿಗೆ ಪ್ರಶಸ್ತಿ ಪ್ರಧಾನ ಪುರಸ್ಕೃತರ ಪರಿಚಯ ಕೃಷಿ ತಾಂತ್ರಿಕತೆಗಳ ಕೈಪಿಡಿ, ಹಸ್ತ ಪ್ರತಿ ಪ್ರಕಟಣೆಗಳ ಬಿಡುಗಡೆ ನಡೆಯಲಿದೆ.

ಸಂಜೆ 6.55ಕ್ಕೆ ಫೈರ್ ಶೋ ನಡೆಯಲಿದೆ. ಸಂಜೆ 7 ಗಂಟೆಗೆ ಎಕ್ಸಟೆಸ್ಸಿ ತಂಡದಿಂದ ನೃತ್ಯ ಕಾರ್ಯಕ್ರಮ, ಸಂಜೆ 7.15 ರಿಂದ 9.15ವರೆಗೆ ಸವಾರಿ ತಂಡದವರಿಂದ ಕಾರ್ಯಕ್ರಮ, ರಾತ್ರಿ 9.15 ರಿಂದ 9.30 ರವರೆಗೆ ಎಕ್ಸ್ಟಸ್ಸಿ ತಂಡದಿಂದ ನೃತ್ಯ ಕಾರ್ಯಕ್ರಮ ಹಾಗೂ ರಾತ್ರಿ 9.40 ರಿಂದ 11.00 ರವರೆಗೆ ಸಂಜಿತ್ ಹೆಗಡೆ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಪೊಲೀಸರ ಸಮಯ ಪ್ರಜ್ಞೆ:ಪೋಷಕರ ಮಡಿಲು ಸೇರಿದ ಮನೆ ಬಿಟ್ಟು ಹೋಗಿದ್ದ ಮಕ್ಕಳು

**ಬೆಂಗಳೂರು: ಅಪ್ಪ- ಅಮ ಸಾರಿ?.. ಎಂದು ಹಾಳೆಯಲ್ಲಿ ಬರೆದಿಟ್ಟು ಮನೆ ತೊರೆದು ಹೋಗಿದ್ದ ಇಬ್ಬರು ಮಕ್ಕಳು ಪೊಲೀಸರ ಸಮಯ ಪ್ರಜ್ಞೆಯಿಂದ ಪೋಷಕರ ಮಡಿಲಿಗೆ ಸೇರಿದ್ದಾರೆ. ಮಾರತಳ್ಳಿಯ ಅಶ್ವಥ್‌ನಗರದಲ್ಲಿ ಮೂಲತಃ ಚಿತ್ರದುರ್ಗದ ದಂಪತಿ 13 ವರ್ಷದ ಮಗಳು ಹಾಗೂ 9 ವರ್ಷದ ಮಗನೊಂದಿಗೆ ವಾಸವಿದ್ದಾರೆ.**

ಕೆಲಸದ ನಿಮಿತ್ತ ದಂಪತಿ ಚಿತ್ರದುರ್ಗಕ್ಕೆ ಹೋಗಿದ್ದಾರೆ. ಹಾಗಾಗಿ ಫೆ.1 ಎಂದು ಮಗಳಿಗೆ ದೂರವಾಣಿ ಕರೆ ಮಾಡಿ ಟ್ಯೂಷನ್‌ಗೆ ಹೋಗುವಂತೆ ಹೇಳಿದಾಗ ಇಬ್ಬರು ಮಕ್ಕಳು ಟ್ಯೂಷನ್‌ಗೆ ಹೋಗುವುದಿಲ್ಲ ಎಂದು ಹಠ ಮಾಡಿದಾಗ ಪೋಷಕರು ಬೈದಿದ್ದಾರೆ. ಅಪ್ಪ-ಅಮ ಬೈದಿದ್ದಕ್ಕೆ ಸಿಟ್ಟಾದ ಮಗಳು ಹಾಳೆ ತೆಗೆದುಕೊಂಡು ಅಪ್ಪ-ಅಮ ಸಾರಿ ಎಂದು ಬರೆದಿಟ್ಟು ಬ್ಯಾಗ್‌ನಲ್ಲಿ ಬಟ್ಟೆ ತುಂಬಿಕೊಂಡಿದ್ದಲ್ಲದೇ ತನ್ನ ಆಧಾರ್‌ಕಾರ್ಡ್ ತೆಗೆದುಕೊಂಡು ಮೊಬೈಲ್‌ನ್ನು ಮನೆಯಲ್ಲೇ ಬಿಟ್ಟು ತಮನನ್ನು ಕರೆದುಕೊಂಡು ಅಂದು ಮಧ್ಯಾಹ್ನ 3 ಗಂಟೆಗೆ ಮನೆ ಬಾಗಿಲು ಹಾಕಿಕೊಂಡು ಹೋಗಿದ್ದಾಳೆ.

ಮನೆ ಸಮೀಪದ ಬಿಎಂಟಿಸಿ ಬಸ್



ನಿಲ್ದಾಣಕ್ಕೆ ಹೋಗಿ ಬಸ್ ಹತ್ತಿಆಧಾರ್‌ಕಾರ್ಡ್ ತೋರಿಸಿ ಇಬ್ಬರು ಮೆಜೆಸ್ಟಿಕ್‌ಗೆ ಹೋಗಿದ್ದಾರೆ. ನಂತರ ಅಲ್ಲಿಂದ ಚಿತ್ರದುರ್ಗದ ಬಸ್ ಹತ್ತಿ ಹೋಗಿ ಬಳಿಕ ಅಲ್ಲಿಂದ ಭದ್ರಾವತಿ ಬಸ್ ಹತ್ತಿ ಹಲವೆಡೆ ಸುತ್ತಾಟ ನಡೆಸಿದ್ದಾರೆ. ಇದ್ಯಾವುದರ ಅರಿವೇ ಇಲ್ಲದೇ ಕೆಲ ಸಮಯದ ಬಳಿಕ ಪೋಷಕರು ಮತ್ತೆ ಮೊಬೈಲ್‌ಗೆ ಕರೆ ಮಾಡಿದ್ದಾರೆ. ಆದರೆ ಮಕ್ಕಳು ಕರೆ ಸ್ವೀಕರಿಸಿಲ್ಲ. ಇದರಿಂದ ಗಾಬ-ರಿಯಾದ ಬಾಲಕೀಯ ತಾಯಿ ತಮ ಮನೆಯ ಸಮೀಪದಲ್ಲೆ ವಾಸವಿರುವ ತನ್ನ ಸಹೋದರನಿಗೆ ಕರೆ ಮಾಡಿ ಮನೆ ಬಳಿ ಹೋಗಿ ನೋಡುವಂತೆ ತಿಳಿಸಿದ್ದಾರೆ. ಅವರು ಮನೆಗೆ ಹೋಗಿ ನೋಡಿದಾಗ ಮಕ್ಕಳಿರಲಿಲ್ಲ. ಮೊಬೈಲ್ ರಿಂಗ್ ಆಗುತ್ತಲೇ ಇತ್ತು.

ಮನೆಪೂರ್ತಿ ಹುಡುಕಾಡಿ ದಾಗ ಹಾಳೆಯೊಂದು ಕಣ್ಣಿಗೆ ಬಿದ್ದಿದೆ. ಅದು ಏನೆಂದು ನೋಡಿದಾಗ ಅದರಲ್ಲಿ ಅಪ್ಪ-ಅಮ ಸಾರಿ. ಎಂದು ಬರೆದಿರುವುದು ಕಂಡು ಬಂದಿದೆ. ಇದರಿಂದ ಗಾಬ-ರಿಯಾದ ಅವರು ತಕ್ಷಣ ಪೊಲೀಸರಿಗೆ ಮಕ್ಕಳು ಕಾಣೆಯಾಗಿರುವ ಬಗ್ಗೆ ದೂರು ನೀಡಿ ಹುಡುಕಿ ಕೊಡುವಂತೆ ಮಕ್ಕಳ ಫೋಟೋಗಳನ್ನು ಕೊಟ್ಟಿದ್ದಾರೆ. ತಕ್ಷಣ ಕಾರ್ಯಪ್ರವೃತ್ತರಾದ ಹೆಚ್‌ಎಎಲ್ ಠಾಣೆ ಪೊಲೀಸರು ಮಂಗಳೂರು, ಶಿವಮೊಗ್ಗ ಸೇ-ರಿದಂತೆ ರಾಜ್ಯಾದ್ಯಂತ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದರು. ಅಷ್ಟೇ ಅಲ್ಲದೇ ಸಾಮಾಜಿಕ ಜಾಲತಾಣದಲ್ಲಿಯೂ ಮಾಹಿತಿ ಹಂಚಿಕೊಂಡಿದ್ದರು. ಈ ನಡುವೆ ಮಕ್ಕಳು ಭದ್ರಾವತಿಯ ಬಸ್ ನಿಲ್ದಾಣದಲ್ಲಿ ನಿಂತಿರುವುದನ್ನು ಗಮನಿಸಿದ ಸ್ಥಳೀಯರೊಬ್ಬರು ಪೊಲೀಸರಿಗೆ ವಿಷಯ ತಿಳಿಸಿದ್ದಾರೆ. ಈ ಖಚಿತ ಮಾಹಿತಿ ಮೇರೆಗೆ ಬಸ್ ನಿಲ್ದಾಣದ ಬಳಿ ಹೋಗಿ ನೋಡಿದಾಗ ಕಾಣೆಯಾಗಿದ್ದ ಇಬ್ಬರು ಮಕ್ಕಳು ನಿಂತಿರುವುದು ಕಂಡು ಬಂದಿದೆ. ತಕ್ಷಣ ಅವರು ಮಕ್ಕಳನ್ನು ಠಾಣೆಗೆ ಕರೆದೊಯ್ದು ವಿಚಾರಿಸಿದಾಗ ನಾವು ಬೆಂಗಳೂರಿನಿಂದ ಬಂದಿರುವುದಾಗಿ ಹೇಳಿದ್ದಾರೆ. ಬೆಂಗಳೂರಿನಲ್ಲಿ ಯಾವ ಪ್ರದೇಶದಲ್ಲಿ ವಾಸವಾಗಿದ್ದೀರಿ ಎಂದು ವಿಚಾರಿಸಿದಾಗ ಹೆಚ್‌ಎಎಲ್ ಎಂದು ತಿಳಿಸಿದ್ದಾರೆ.

# ಮಸ್ಕಿ ಬ್ಲಾಕ್ ಕಾಂಗ್ರೆಸ್ ನೇತೃತ್ವದಲ್ಲಿ ಮನರೇಗಾ ಬಚಾವ್ ಸಂಗ್ರಾಮ ಪ್ರತಿಭಟನೆ




ನೈಜ್ಯ ದೆಸೆ ನ್ಯೂಸ್

ಮಸ್ಕಿ: ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ ನರೇಗಾ ಯೋಜನೆಯ ಹೆಸರಿನಲ್ಲಿ ಬದಲಾ ವಣೆ ಮಾಡುವುದರ ಮೂಲಕ ಮಹಾತ್ಮಾ ಗಾಂಧಿಯವರ ಹೆಸರನ್ನು ನಿಧಾನವಾಗಿ ಅಳಿಸಿ ಹಾಕುವ ಪ್ರಯತ್ನ ಮಾಡುತ್ತಿದೆ ಎಂದು ಮಸ್ಕಿ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಸಿದ್ದನಗೌಡ ತುರುವಿಹಾಳ ಆರೋಪಿಸಿದರು.

ಮಸ್ಕಿ ವಿಧಾನಸಭಾ ಕ್ಷೇತ್ರದ ಗ್ರಾಮೀಣ ಹಾಗೂ ಬ್ಲಾಕ್ ಕಾಂಗ್ರೆಸ್ ನೇತೃತ್ವದಲ್ಲಿ ಪಟ್ಟಣದ ಗಾಂಧಿನಗರದ ಡಾಕ್ಟರ್ ಬಿ ಆರ್ ಅಂಬೇಡ್ಕರ್ ಪ್ರತಿಮೆ ಮುಂಭಾಗದಲ್ಲಿ ಬುಧವಾರ ಹಮ್ಮಿಕೊಳ್ಳಲಾದ ಮನ್ ರೇಗಾ ಬಚಾವ್ ಸಂಗ್ರಾಮ ಪ್ರತಿಭಟನೆಯಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು. ನಂತರ ಮಾತನಾಡಿದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ್ ಪಾಟೀಲ್ ಪ್ರತಿಯೊಬ್ಬ ವ್ಯಕ್ತಿಗೆ ನೂರು ದಿನಗಳ ಉದ್ಯೋಗ ಲಭಿಸಬೇಕು ಎನ್ನುವ ಉದ್ದೇಶದಿಂದ ಮಹತ್ಮಾಗಾಂಧಿ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೆ ತರಲಾಗಿತ್ತು. ಆದ-ರೆ ಇದನ್ನು ಹಂತಹಂತವಾಗಿ ಯೋಜನೆಯನ್ನು ನಿಲ್ಲಿಸುವ ಹುನ್ನಾರವನ್ನು ಕೇಂದ್ರ ಸರಕಾರ ಹೊಂದಿದೆ.

ಇಷ್ಟೊಂದು ಒಳ್ಳೆಯ ಯೋಜನೆಯನ್ನು ಮಹಾತ್ಮಗಾಂಧಿ ಯೋಜನೆಗೆ ರಾಮ ಹೆಸರು ಇಡುವ ಬದಲು ರಾಮನ ಹೆಸ-ರಿನಲ್ಲೆ ಹೊಸತಾದ ಯೋಜನೆಯನ್ನು ಪ್ರತಿಯೊಬ್ಬರೂ ಒಪ್ಪುತ್ತಿದ್ದೇವು ಎಂದರು. ಪ್ರತಿಭಟನೆಗೆ ಮುನ್ನ ಪಟ್ಟಣದ ಗಾಂಧಿನಗರದ ಅಂಬೇಡ್ಕರ್ ವೃತ್ತ ಮುಂಭಾಗದಿಂದ ಅಶೋಕ ವೃತ್ತ ಮಾರ್ಗವಾಗಿ ಹೊರಟು ಹಳೆ ಬಸ್ ನಿಲ್ದಾಣದ ತನಕ ಪಾದಯಾತ್ರೆಯನ್ನು ನಡೆಸಲಾಯಿತು.

ಈ ಸಂದರ್ಭದಲ್ಲಿ ಅಂದಾನಪ್ಪ ಗುಂಡಳ್ಳಿ, ವೆಂಕಟರೆಡ್ಡಿ ಗೌಡ ಹಾಲಾಪೂರ, ಹನುಮೇಶ ಬಾಗೋಡಿ,ಮಲ್ಲಯ್ಯ ಬಳ್ಳ,ಹನುಮಂತಪ್ಪ ಮುದ್ದಾಪುರ, ಮಹಿಬೂಬ ಸಾಬ್ ಮುದ್ದಾಪುರ, ಹಾಗೂ ಕಾಂಗ್ರೆಸ್ ಮುಖಂಡರು ಇತರರು ಭಾಗವಹಿಸಿದ್ದರು.

# ಸಮಾಜ ಸೇವಕ ಡಾ.ಪ್ರಭುಗೌಡರಿಗೆ ಸನ್ಮಾನ



ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದಲ್ಲಿ ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಹಂಡೇ ವಜೀರ ಸಮಾಜದ ತಾಲೂಕ ಘಟಕದ ವತಿಯಿಂದ ಹಮ್ಮಿಕೊಂಡ 2026 ನೇ ಸಾಲಿನ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ,



ಸಮಾಜ ಸೇವಕ ಡಾ.ಪ್ರಭುಗೌಡ ಲಿಂಗದಳ್ಳಿ ಇವರನ್ನು ಸಮಾಜಮುಖಿ ಕಾರ್ಯಗಳಿಗಾಗಿ ಸನ್ಮಾನಿಸಿ ಗೌರವಿಸಲಾಯಿತು.


ಪೂಜ್ಯರಾದ ಜಯಗುರು ಸಿದ್ದೇಶ್ವರ ಮಹಾಸ್ವಾಮಿಗಳು, ಗುರುಮಡಿವಾಳೇಶ್ವರ ಶಿವಾಚಾರ್ಯರು, ಶಿವಕುಮಾರ ಶ್ರೀಗಳು,ಅಸ್ಕಿ ಫೌಂಡೇಶನ್ ಅಧ್ಯಕ್ಷ ಸಿ.ಬಿ.ಅಸ್ಕಿ, ಬಿಜೆಪಿ ಮುಖಂಡ ಆರ್ ಎಸ್ ಪಾಟೀಲ ಕೂಚಬಾಳ,ಕಸಾಪ ಅಧ್ಯಕ್ಷ ಆರ್.ಎಲ್.ಕೊಪ್ಪದ, ಹ.ವ.ಸ. ತಾಳಿಕೋಟಿ ಘಟಕದ ಅಧ್ಯಕ್ಷ ರಾಮನಗೌಡ ಬಿರಾದಾರ ಹಾಗೂ ಗಣ್ಯಮಾನ್ಯರು ಇದ್ದರು.

# ಮಾನ್ವಿ ಪಟ್ಟಣದಲ್ಲಿ ಗಣರಾಜ್ಯೋತ್ಸವದಂದು ಡಾ. ಬಿ.ಆರ್. ಅಂಬೇಡ್ಕರ್ ರವರ ಬಾವಚಿತ್ರವನ್ನಿರಸದೇ ಇರುವವರ ವಿರುದ್ಧ ಸೂಕ್ತ ಕ್ರಮಕ್ಕೆ ದಲಿತ ಸೇನೆ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಜನವರಿ 26ರಂದು ಆಯೋಜಿಸಲಾದ ಗಣರಾಜ್ಯೋತ್ಸವದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾರತದ ಸಂವಿಧಾನದ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರವನ್ನಿರಿಸದೆ ಧ್ವಜಾರೋಹಣ ಮಾಡಿರುವ ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದ ವಾಸವಿ ಕಲ್ಯಾಣ ಮಂಟಪದ ಹತ್ತಿರ ಆರ್ಯ ವೈಶ್ಯ ಸಮಾಜದ ಪದಾಧಿಕಾ-ರಿಗಳ ನಡೆ ಖಂಡನೀಯವಾಗಿದೆ ಎಂದು ಆರೋಪಿಸಿ ದಲಿತ ಸೇನೆಯ ತಾಲೂಕ ಅಧ್ಯಕ್ಷ ಬಸವರಾಜ್ ಗೋಸ್ಲಿ ಸಹಾಯಕ ಆಯುಕ್ತರಿಗೆ ಮನವಿಯನ್ನು ಸಲ್ಲಿಸಿದರು.**

ಗಣರಾಜ್ಯೋತ್ಸವವು ಸಂವಿಧಾನದ ಮೌಲ್ಯಗಳು ಮತ್ತು ಪ್ರಜಾಪ್ರಭುತ್ವದ ತತ್ವಗಳನ್ನು ಸ್ಮರಿಸುವ ರಾಷ್ಟ್ರೀಯ ಹಬ್ಬವಾಗಿದೆ. ಇಂತಹ ಸಂದರ್ಭಗಳಲ್ಲಿ ಸಂವಿಧಾನದ ಪಿತಾಮಹರ ಭಾವಚಿತ್ರವನ್ನಿಡಬೇಕೆಂದು ಸರ್ಕಾರ ಆದೇಶವನ್ನು ಹೊರಡಿಸಿದೆ.




ಆದರೆ ಆರ್ಯ ವೈಶ್ಯ ಸಮಾಜದ ಪದಾಧಿಕಾರಿಗಳು ಸರ್ಕಾರದ ಆದ-ೇಶವನ್ನು ಉಲ್ಲಂಘಿಸಿ ಡಾ.ಬಾಬಾ ಸಾಹೇಬ ಅಂಬೇಡ್ಕರ್ ರವರ ಭಾವಚಿತ್ರವನ್ನಿಡದೇ ಅವರಿಗೆ ಅವಮಾನ ಮಾಡಿದ್ದಾರೆ.

ಸದರಿ ಘಟನೆಯ ಕು-ರಿತು ಸಮಗ್ರ ತನಿಖೆ ನಡೆಸಿ, ಸರ್ಕಾರದ ನಿಯಮ ಉಲ್ಲಂಘಸಿರುವ ಆರ್ಯವೈಶ್ಯ ಸಮಾಜದ ಪದಾಧಿಕಾರಿಗಳ ವಿರುದ್ಧ ಕಾನೂನುಬದ್ಧ ಕ್ರಮ ಕೈಗೊಳ್ಳುವಂತೆ ಜೊತೆಗೆ, ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಜಿಲ್ಲೆಯ ಎಲ್ಲಾ ಸಂಘಟನೆಗಳಿಗೆ ಸ್ಪಷ್ಟ ಮಾರ್ಗಸೂಚಿಗಳನ್ನು ನೀಡಬೇಕು ಸಂವಿಧಾನದ ಗೌರವ ಹಾಗೂ ಸಾರ್ವಜನಿಕ ಶಾಂತಿ ಕಾಪಾಡುವ ನಿಟ್ಟಿನಲ್ಲಿ ತಕ್ಷಣ ಕ್ರಮ ಕೈಗೊಳ್ಳ ಬೇಕೆಂದು ಹೇಳಿದರು . ಈ ಸಂದರ್ಭದಲ್ಲಿ ಗಣೇಶ್ ದೇವರ ಭೂಪುರ , ಶಿವಪ್ಪ ಯಲಗಟ್ಟ ಇದ್ದರು.

# ಆರ್.ಎಚ್. ನಂಬರ್ ಒನ್ ಗ್ರಾಮ ಪಂಚಾಯಿತಿಯಲ್ಲಿ ಭಾವಪೂರ್ಣ ಬೀಳ್ಕೊಡುಗೆ ಸಮಾರಂಭ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಗ್ರಾಮ ಪಂಚಾಯಿತಿಯ ಐದು ವರ್ಷದ ಅವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಆರ್.ಎಚ್. ನಂಬರ್ ಒನ್ ಗ್ರಾಮ ಪಂಚಾಯಿತಿಯ ಎಲ್ಲಾ ಸದಸ್ಯರಿಗೆ ಬೀಳ್ಕೊಡುವ ಭಾವಪೂರ್ಣ ಹಾಗೂ ಗೌರವಪೂರ್ಣ ಕಾರ್ಯಕ್ರಮವನ್ನು ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು.**

ಈ ಸಮಾರಂಭದಲ್ಲಿ ಹಾಲಿ ಅಧ್ಯಕ್ಷರಾದ ರಹಮತ್ ಪಾಷಾ, ಅವರ ನಂತರ ಈ ಅವಧಿಯ ಮಾಜಿ ಅಧ್ಯಕ್ಷೆ ರೇಣುಕಾ, ಉಪಾಧ್ಯಕ್ಷೆ ರಾಣಿ ಮಂಡಲ, ಪಂಚಾಯಿತಿಯ ಎಲ್ಲಾ ಸದಸ್ಯರು, ಹಿರಿಯ ಸದಸ್ಯರು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಐದು ವರ್ಷಗಳ ಸೇವಾ ಅವಧಿಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು ಗ್ರಾಮಾಭಿವೃದ್ಧಿಯನ್ನೇ ಗುರಿಯಾಗಿಸಿಕೊಂಡು ಪ್ರಾಮಾಣಿಕವಾಗಿ ಸೇವೆ




ಸಲ್ಲಿಸಿದರು. ಕುಡಿಯುವ ನೀರು, ರಸ್ತೆ, ಸ್ವಚ್ಛತೆ, ನೈರ್ಮಲ್ಯ, ಆರೋಗ್ಯ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವೃದ್ಧರ ಪಿಂಚಣಿ, ವಸತಿ ಯೋಜನೆಗಳು ಸೇರಿದಂತೆ ಅನೇಕ ಜನಹಿತ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಯಿತು. ಅಧ್ಯಕ್ಷರಾದ ರಹಮತ್ ಪಾಷಾ ಅವರ ನಾಯಕತ್ವವು ಈ ಅವಧಿಯ ಗ್ರಾಮ ಪಂಚಾಯಿತಿಗೆ ದಿಕ್ಕು ತೋ-ರಿದ ದೀಪವಾಗಿತ್ತು. ಪ್ರತಿಯೊಂದು ಸಮಸ್ಯೆಯನ್ನು ಶಾಂತಚಿತ್ತದಿಂದ ಕೇಳಿ, ಸದಸ್ಯರು, ಅಧಿಕಾ-ರಿಗಳು ಹಾಗೂ ಸಿಬ್ಬಂದಿಗಳೊಂದಿಗೆ ಸಮನ್ವಯ ಸಾಧಿಸಿ ಪರಿಹಾರ ಕಂಡುಕೊಳ್ಳುವ ಅವರ ಗುಣ ಗ್ರಾಮಸ್ಥರ ಮೆಚ್ಚುಗೆಗೆ ಪಾತ್ರವಾಯಿತು.



ವಿಶೇಷವಾಗಿ ಕೋವಿಡ್?19 ಸಂಕಷ್ಟದ ಸಂದರ್ಭದಲ್ಲಿ ಮುಂಚೂಣಿಯಲ್ಲಿ ನಿಂತು ಜನರ ಆರೋಗ್ಯ, ಆಹಾರ ಹಾಗೂ ಸುರಕ್ಷತೆಗೆ ಮೊದಲ ಆದ್ಯತೆ ನೀಡಿದ ಅವರ ಸೇವೆ ಸ್ಮರಣೀಯವಾಗಿದೆ. ಈ ಅವಧಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಎಲ್ಲಾ ಯೋಜನೆಗಳು ಮತ್ತು ಕಾರ್ಯಕ್ರಮಗಳು?ಸ್ವಚ್ಛ ಭಾರತ ಅಭಿಯಾನ, ಲಸಿಕೆ ಅಭಿಯಾನ, ಆರೋಗ್ಯ ಜಾಗೃತಿ ಕಾರ್ಯಕ್ರಮಗಳು, ಸಾಮಾಜಿಕ ಭದ್ರತಾ ಯೋಜನೆಗಳು ಗ್ರಾಮ ಪಂಚಾಯಿತಿ ಸದಸ್ಯರು, ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಪರಸ್ಪರ ಸಹಕಾರದಿಂದ ಯಶಸ್ವಿಯಾಗಿ ಜಾರಿಗೊಂಡವು. ಕಾರ್ಯಕ್ರಮದಲ್ಲಿ ಮಾತನಾಡಿದ ಗ್ರಾಮ ಪಂಚಾಯಿತಿ ಸದಸ್ಯರಾದ ಲಾಜರ್ ಸಿರಿಲ್ ಅವರು, "ಈ ಐದು ವರ್ಷಗಳ ಸೇವೆ ನನ್ನ ಜೀವನದ ಅಮೂಲ್ಯ ಅಧ್ಯಾಯವಾಗಿದೆ.

ಅಧ್ಯಕ್ಷರಾದ ರಹಮತ್ ಪಾಷಾ ಅವರ ಮಾರ್ಗದರ್ಶನ, ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ನಿಸ್ವಾರ್ಥ ಸಹಕಾರವಿಲ್ಲದೆ ಈ ಸೇವೆ ಸಾಧ್ಯವಾಗುತ್ತಿರಲಿಲ್ಲ. ಕೋವಿಡ್ ಸಮಯದಲ್ಲಿ ಜನರೊಂದಿಗೆ ನಿಂತು ಕೆಲಸ ಮಾಡಿದ ಅನುಭವ ಸದಾ ನೆನಪಿನಲ್ಲಿ ಉಳಿಯಲಿದೆ" ಎಂದು ಭಾವನಾತ್ಮಕವಾಗಿ ಹೇಳಿದರು. ಈ ಸಂದರ್ಭದಲ್ಲಿ ಅವಧಿ ಪೂರ್ಣಗೊಳಿಸಿದ ಎಲ್ಲಾ ಗ್ರಾಮ ಪಂಚಾಯಿತಿ ಸದಸ್ಯರಿಗೆ ಗೌರವ ಸನ್ಮಾನ ಮಾಡಿ ಸ್ಮರಣಾರ್ಥವಾಗಿ ಪುಸ್ತಕಗಳನ್ನು ನೀಡಿ ಅಭಿನಂದಿಸಲಾಯಿತು. ಈ ಬೀಳ್ಕೊಡುಗೆ ಸಮಾರಂಭವು ಕೃತಜ್ಞತೆ, ಗೌರವ ಹಾಗೂ ಸೇವಾ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತೆ ಯಶಸ್ವಿಯಾಗಿ ಮುಕ್ತಾಯಗೊಂಡಿತು.

## ಸಾಹಿತ್ಯ ಸಿಂಚನ

ಕನವರಿಕೆ.!

ಮುಂಜಾನೆ ಬಿದ್ದ ಕನಸೊಳಗೆ ನೀನಿದ್ದೆ
ಹಾರಿ ಹೋಯಿತು ನನ್ನಯ ಸಿಹಿನಿದ್ದೆ
ಗೊತ್ತಿಲ್ಲ ಅಶ್ರುವೋ? ಆನಂದಭಾಷ್ಪವೋ?
ಕಂಗಳ ಅಂಚೆಲ್ಲ ಆಯಿತು ಒದ್ದೊದ್ದೆ.!

ಕನಸಿನಂಗಳದಿ ನಿಂತು 'ಮಿಸ್ ಯು'
ಅಂದಿದ್ದು ನೀನೋ..? ನಾನೋ..?
ಎಲ್ಲವೂ ಅಕ್ಷರಶಃ ಅಯೋಮಯ.!
ಕಣ್ಣಂಚಲಿ ಕಾಡಿದೆ ಮುದ್ದು ವಿಸ್ಮಯ.!

ಕಣ್ಣಿನಂಗಳದಿ ಬಂದು 'ಹಾಯ್ ಯು'
ಎಂದು ಕೂಗಿದ್ದು ನೀನೋ ನಾನೋ?
ಸಕಲವೂ ಮೋಡಿ ಗಾರುಡಿ ಮಾಯ.!
ಭಾವ ಬಾಂದಳದಿ ನವಿರು ಸಂಚಯ.!

ನಿನಗೇಕೆ ಕನಸಲಿ ಕಾಡುವ ಬಯಕೆ
ನನಗೇಕೆ ಕನಸಲೂ ನಿನ್ನ ಕನವರಿಕೆ.?
ನಿನಗೇಕೆ ನಿದ್ದೆ ಕೆಡಿಸುವ ಒಡಂಬಡಿಕೆ.?
ನನಗೇಕೆ ಗಾಢ ನಿದ್ದೆಯಲ್ಲು ಚಡಪಡಿಕೆ.?

ಕಣ್ರೆಪ್ಪೆಯಡಿ ಕುಳಿತು ಕಾಯುವುದೇಕೆ.?
ಕನಸಲ್ಲು ಎಡಬಿಡದೆ ತೋಯಿಸುವುದೇಕೆ.?
ಆನಂದಭಾಷ್ಪದಿ ನಿಂದು ಮೀಯುವುದೇಕೆ?
ಕಂಬನಿಯಲ್ಲು ಮಿಂದು ನೋಯುವುದೇಕೆ.?

ನಿತ್ಯ ಸ್ವರ ಸ್ವರದಿ ಏಕೀ ಗುಪ್ತ ಸಂಚಾರ
ಸದಾ ನರ ನರದಿ ಏಕೀ ಸುಪ್ತ ಝೇಂಕಾರ
ನಯನ ನೋಟ ಆವರಿಸಿ ಏಕೀ ಠೇಂಕಾರ
ಕಡೆಗೆ ಕನಸಲ್ಲು ಕಾಡುವ ಸವಿ ಹುನ್ನಾರ.!


ಪ್ರತಿ ಮುಂಜಾನೆ ಮತ್ತಿದೇ ಹೊಂಗನಸಕಾವ್ಯ
ಪದಾತೀತ ಒಲವು ಚೆಲುವಿನ ಭಾವ-ಭಾಷ್ಯ
ಅಕ್ಷಿಯಂಗಳ ಬೆಳದಿಂಗಳಾಗಿಸುವ ಸಮ್ಮೋಹನ
ಅನುರಾಗದಲೆಗಳ ಅಪೂರ್ವ ನಾದಸಂಕೀರ್ತನ!

ಎ.ಎನ್.ರಮೇಶ್. ಗುಬ್ಬಿ.

## ಸಾಸಲಮರಿ ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಜನಪ್ರಿಯ ವಿಧಾನಪರಿಷತ್ ಶಾಸಕರಾದ ಶ್ರೀ ಬಸನಗೌಡ ಬಾದರ್ಲಿ ಅವರ ಅನುದಾನದಿಂದ ಸಿಂಧನೂರು ತಾಲೂಕಿನ ಸಾಸಲಮರಿ ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಆವರಣದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ಕಾರ್ಯಕ್ರಮವನ್ನು ಶ್ರದ್ಧಾ-ಭಕ್ತಿಯಿಂದ ಹಾಗೂ ವಿಜೃಂಭಣೆಯಿಂದ ನೆರವೇರಿಸಲಾಯಿತು.



ಕಾರ್ಯಕ್ರಮದಲ್ಲಿ ಆರ್.ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕರಾದ ಶ್ರೀ ಸೋಮನಗೌಡ ಬಾದರ್ಲಿ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಪೂಜೆ ಸಲ್ಲಿಸಿ ಕಾಮಗಾ-ರಿಗೆ ಅಧಿಕೃತ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, "ಗ್ರಾಮದ ಅಭಿವೃದ್ಧಿಗೆ ಸಮುದಾಯ ಭವನವು ಪ್ರಮುಖ ಪಾತ್ರ ವಹಿಸಲಿದೆ. ಸಾರ್ವಜನಿಕ ಸಭೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಮದುವೆ ಸಮಾರಂಭಗಳು ಹಾಗೂ ವಿವಿಧ ಸಾಮಾಜಿಕ ಚಟುವಟಿಕೆಗಳಿಗೆ ಈ ಭವನವು ಅನುಕೂಲಕರವಾಗಲಿದೆ" ಎಂದು ಹೇಳಿದರು. ಈ ಯೋಜನೆಗೆ ಅನುದಾನ ಒದಗಿಸಿದ ಶ್ರೀ ಬಸನಗೌಡ ಬಾದರ್ಲಿ ಅವರ ಸೇವೆಯನ್ನು ಗ್ರಾಮಸ್ಥರು ಶ್ಲಾಘಿಸಿ, ಅವರ ಸಾಮಾಜಿ-ಕ ಕಾಳಜಿ ಹಾಗೂ ಅಭಿವೃದ್ಧಿ ದೃಷ್ಟಿಕೋನವನ್ನು ಮೆಚ್ಚಿದರು. ಕಾರ್ಯಕ್ರಮದಲ್ಲಿ ದೇವಸ್ಥಾನ ಸಮಿತಿ ಸದಸ್ಯರು, ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಸದಸ್ಯರು, ಸ್ಥಳೀಯ ಮುಖಂಡರು, ಹಿರಿಯ ನಾಗರಿಕರು, ಯುವಕರು, ಮಹಿಳೆಯರು ಹಾಗೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಯಶಸ್ಸು ತಂದುಕೊಟ್ಟರು. ಭೂಮಿ ಪೂಜೆಯ ಬಳಿಕ ಪ್ರಸಾದ ವಿನಿಯೋಗ ಹಾಗೂ ಸೌಹಾರ್ದ ಕೂಟ ನಡೆಯಿತು. ಗ್ರಾಮದಲ್ಲಿ ಶೀಘ್ರದಲ್ಲೇ ಗುಣಮಟ್ಟದ ಸಮುದಾಯ ಭವನ ನಿರ್ಮಾಣವಾಗಲಿದ್ದು, ಇದರಿಂದ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಸಂಘಟಕರು ತಿಳಿಸಿದರು.

## ಕೃಷ್ಣ ರಾ.ಸೊರಟೂರ ಅವರಿಗೆ ಉತ್ತರ ಕರ್ನಾಟಕ ಛಾಯಾರತ್ನ ಪ್ರಶಸ್ತಿ

ನೈಜ್ಯ ದೆಸೆ ನ್ಯೂಸ್

ನಗರದ ಛಾಯಾಗ್ರಹಕ ಕೃಷ್ಣ ರಾ.ಸೊರಟೂರ ಅವರಿಗೆ ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ನಡೆದ ಅಂತರರಾಷ್ಟ್ರೀಯ ಮಟ್ಟದ ಡಿ ಜಿ ಫೋಟೊ ಎಕ್ಸ್ ಪೋ ಎರಡು ದಿನಗಳ ವಸ್ತು ಪ್ರದರ್ಶನದಲ್ಲಿ ಉತ್ತರ ಕರ್ನಾಟಕ



ಛಾಯಾರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕರ್ನಾಟಕ ಫೋಟೋ ಮತ್ತು ವಿಡಿಯೋಗ್ರಾಫರ್ಸ್, ಹುಬ್ಬಳ್ಳಿ ಫೋಟೊ ಮತ್ತು ವಿಡಿಯೋ ಗ್ರಾಫರ್ಸ್ ಸಂಘಗಳ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿಯನ್ನು ಅತಿಥಿಗಳು ನೀಡಿದರು.

# ಕರ್ನಾಟಕಕ್ಕೆ ರಾಷ್ಟ್ರೀಯ ಪುರುಷರ ಖೋ ಖೋ ಚಾಂಪಿಯನ್ ಪಟ್ಟ-ಬೆಸ್ಟ್ ಆಲ್ ರೌಂಡರ್ ಪ್ರದರ್ಶನ ತೋರಿದ ಮೌನೇಶ್ ಬಳಗಾನೂರ ಇತಿಹಾಸಾತ್ಮಕ ಗೆಲುವು

ನೈಜ್ಯ ದೆಸೆ ನ್ಯೂಸ್

**ತುಮಕೂರು: ಖೋ ಖೋ ಇಂಡಿಯಾ ಹಾಗೂ ಕರ್ನಾಟಕ ಅಮೆಚೂರ್ ಖೋ ಖೋ ಸಂಸ್ಥೆಯ ಸಹಯೋಗದಲ್ಲಿ ತುಮಕೂರಿನ ಪಿವಿ ಅಂಗಳದಲ್ಲಿ ಆಯೋಜಿಸಲಾದ ಹಿರಿಯರ ರಾಷ್ಟ್ರೀಯ ಖೋ ಖೋ ಚಾಂಪಿಯನ್‌ಶಿಪ್‌ನಲ್ಲಿ ಆತಿಥೇಯ ಕರ್ನಾಟಕ ಪುರುಷರ ತಂಡವು ಪ್ರಥಮ ಬಾರಿಗೆ ಚಾಂಪಿಯನ್ ಆಗಿ ಹೊರಹೊಮ್ಮಿ ರಾಜ್ಯಕ್ಕೆ ಅಪಾರ ಹೆಮ್ಮೆ ತಂದಿದೆ.**




ಮಂಗಳವಾರ ಸಂಜೆ ನಡೆದ ಪ್ರಶಸ್ತಿ ಸುತ್ತಿನ ಅಂತಿಮ ಪಂದ್ಯದಲ್ಲಿ ಕರ್ನಾಟಕ ತಂಡವು ತಮಿಳುನಾಡು ವಿರುದ್ಧ 14-13 ಅಂಕಗಳ ಅತೀ ರೋಚಕ, ತೀವ್ರ ಹಾಗೂ ಜಿದ್ದಾಜಿದ್ದಿನ ಹೋರಾಟದಲ್ಲಿ ಗೆಲುವು ಸಾಧಿಸಿತು. ಪಂದ್ಯದ ಪ್ರತಿ ಕ್ಷಣವೂ ಪ್ರೇಕ್ಷಕರಲ್ಲಿ ಉತ್ಸಾಹ ಹಾಗೂ ರೋಮಾಂಚನವನ್ನು ಹೆಚ್ಚಿಸಿತು. ಆರಂಭದಿಂದಲೇ ಉಭಯ ತಂಡಗಳು ಸಮಾನ ಪೈಪೋಟಿ ನೀಡಿದವು. ಮೊದಲ ಹಂತದಲ್ಲಿ ತಮಿಳುನಾಡು ತಂಡ ಮುನ್ನಡೆ ಸಾಧಿಸಿದರೂ, ಕರ್ನಾಟಕ ತಂಡ ಶಾಂತ ಮನಸ್ಸಿನಿಂದ ಆಟ ಮುಂದುವರಿಸಿ ಹಂತ ಹಂತವಾಗಿ ಅಂತರ ಕಡಿಮೆ ಮಾಡಿತು. ಅಂತಿಮ ಕ್ಷಣಗಳಲ್ಲಿ ಮೌನೇಶ್ ಬಳಗಾನೂರ್ ಅವರ ಅದ್ಭುತ ಆಟ ಪಂದ್ಯಕ್ಕೆ ತಿರುವು ನೀಡಿತು.

ಮೌನೇಶ್ ಬಳಗಾನೂರ್ ಅವರು 2 ನಿಮಿಷ 30 ಸೆ (5 ಅಂಕ ಗಳಿಸಿ) ಪಂದ್ಯಶ್ರೇಷ್ಠ ಪ್ರದರ್ಶನ ನೀಡಿದರು. ಅವರ ವೇಗ, ತಂತ್ರಜ್ಞಾನ, ಚುರುಕುತನ ಮತ್ತು ಆತ್ಮವಿಶ್ವಾಸ ತಂಡದ ಗೆಲುವಿಗೆ ಪ್ರಮುಖ ಕಾರಣವಾಯಿತು. ಶಿವಪ್ಪ ಹಾಗೂ ಇತರ ಸಹ ಆಟಗಾರರು ಅತ್ಯುತ್ತಮ ಸಹಕಾರ ಮತ್ತು ತಂಡಭಾವ ತೋರಿಸಿ ವಿಜಯ ಸಾಧಿಸಿದರು. ಈ ಚಾಂಪಿಯನ್‌ಶಿಪ್‌ನ ಪ್ರಥಮ ಆವೃತ್ತಿಯಲ್ಲೇ ಆತಿಥೇಯ ತಂಡ ಚಾಂಪಿಯನ್ ಆಗಿರುವುದು ಕರ್ನಾಟಕದ ಕ್ರೀಡಾ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲಾಗಿದೆ. ಇದರಿಂದ ರಾಜ್ಯದ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಯುವ ಕ್ರೀಡಾಪಟುಗಳಿಗೆ ಹೊಸ ಉತ್ಸಾಹ ಮತ್ತು ಪ್ರೇರಣೆ ಲಭಿಸಿದೆ.

ವಿಜೇತ ಕರ್ನಾಟಕ ತಂಡಕ್ಕೆ ಜಿಲ್ಲಾಧಿಕಾರಿ ಶುಭಕಲ್ಯಾಣ್ ಅವರು ಟ್ರೋಫಿ, ಪ್ರಶಸ್ತಿ ಹಾಗೂ ಪ್ರಮಾಣಪತ್ರಗಳನ್ನು ಪ್ರದಾನ ಮಾಡಿದರು. ಸಮಾರಂಭದಲ್ಲಿ ತಹಸೀಲ್ದಾರ್ ರಾಜೇಶ್ವರ್, ಪಂದ್ಯಾವಳಿ ಸಂಘಟಕ ಚಿನ್ನಮೂರ್ತಿ, ಶಿವಮೂರ್ತಿ, ಸುರೇಶ್ ಶರ್ಮ, ನರಸಿಂಹರಾಜು, ಗುರುಪ್ರಸಾದ್ ಸೇ-ರಿದಂತೆ ಹಲವು ಗಣ್ಯರು, ಕ್ರೀಡಾ ಅಧಿಕಾರಿಗಳು ಮತ್ತು ಅಭಿಮಾನಿಗಳು ಭಾಗವಹಿಸಿದ್ದರು. ಪಂದ್ಯಾವಳಿಯ ಯಶಸ್ವಿ ಆಯೋಜನೆಗೆ ಖೋ ಖೋ ಇಂಡಿಯಾ ಮತ್ತು ಕರ್ನಾಟಕ ಅಮೆಚೂರ್ ಖೋ ಖೋ ಸಂಸ್ಥೆಯ ಪದಾಧಿಕಾರಿಗಳು ಸಂತಸ ವ್ಯಕ್ತಪಡಿಸಿ, ಮುಂದಿನ ದಿನಗಳಲ್ಲಿ ಇನ್ನೂ ಉತ್ತಮ ಮಟ್ಟದ ಸ್ಪರ್ಧೆಗಳನ್ನು ಆಯೋಜಿಸುವ ಆಶಯ ವ್ಯಕ್ತಪಡಿಸಿದರು.

# ಶಾಲೆ ಸಂಖ್ಯೆ 647 ವಸತಿ ಶಾಲೆಗೆ ನೀರೊ ದಗಿಸಲು ಬೇಡರ ಸಮಿತಿಯಿಂದ ಮನವಿ



ನೈಜ್ಯ ದೆಸೆ ನ್ಯೂಸ್

**ಬೆಂಗಳೂರು ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಶಾಲೆ ಸಂಖ್ಯೆ 647 ಇಂದಿರಾಗಾಂಧಿ ವಸತಿ ಶಾಲೆ ಬಾಲಕ ಬಾಲಕಿಯರ ಪರಿಶಿಷ್ಟ ಪಂಗಡ ವಟಗಲ್ ಶಾಲೆಯಲ್ಲಿ 250 ವಿಧ್ಯಾರ್ಥಿಗಳಿದ್ದು ಈ ಮಕ್ಕಳಿಗೆ ನೀರಿನ ತೊಂದರೆಯನ್ನು ಖುದ್ದಾಗಿ ಬೇಡರ ಸಮಿತಿಯ ಪದಾಧಿಕಾರಿಗಳು ವಶತಿ ಶಾಲೆಗೆ ಭೇಟಿ ನೀಡಿದಾಗ ಅಲ್ಲಿನ ವಿದ್ಯಾರ್ಥಿಗಳು.**

ಪ್ರಾಂಶುಪಾಲರು ನೀರಿನ ಅಭಾವದ ಬಗ್ಗೆ ಪದಾಧಿಕಾರಿಗಳ ಮುಂದೆ ಅಳಲು ತೋಡಿಕೊಂಡಾಗ ಖುದ್ದಾಗಿ ರಾಜ್ಯಾಧ್ಯಕ್ಷರು ಈ ಸಮಸ್ಯೆಯನ್ನು ಪರಿಹರಿಸಲು ಗ್ರಾಮಸ್ಥರ ಜೊತೆ ಸಮಿತಿ ಪದಾಧಿಕಾರಿಗಳು ಇಂದು ಬೆಂಗಳೂರಿನ ಸಚಿವರ ಕಾರ್ಯಲಯದಲ್ಲಿ ಶ್ರೀ ಸತೀಶ್ ಜಾರಕಿಹೊಳಿ ಲೋಕೋಪಯೋಗಿ ಸಚಿವರನ್ನು ಭೇಟಿ ಮಾಡಿ ಮಾತುಕತೆ ನಡೆಸಿ ಮನವಿ ಪತ್ರ ಸಲ್ಲಿಸಲಾಯಿತು.

ಆಗ ಮನವಿ ಸ್ವೀಕರಿಸಿ ಮಾತನಾಡಿದ ಸಚಿವರು ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿ ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದರು ಇ ಸಂದರ್ಭದಲ್ಲಿ ಸಮಿತಿ ರಾಜ್ಯಾಧ್ಯಕ್ಷರಾದ ಅಂಬಣ್ಣ ನಾಯಕ ಗುಜ್ಜಲ್ ಕಾರ್ಯಕಾ-ರಿಣಿ ಸಮಿತಿ ಸದಸ್ಯರಾದ ಜೆಲ್ಲಿ ಆಂಜನೇಯ್ಯ ನೀರಮಾನ್ವಿ ಗ್ರಾಮಸ್ಥರು ಹಾಜರಿದ್ದರು.

# ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಮಂಡಲದಿಂದ ಜನಜಾಗೃತಿ

ನೈಜ್ಯ ದೆಸೆ ನ್ಯೂಸ್

**ಮಸ್ಕಿ. ಪಟ್ಟಣದ ಬಿಜೆಪಿ ಕಾರ್ಯಾಲಯದಲ್ಲಿ ವಿಬಿ-ಜಿ ರಾಮ್ ಜಿ ಯೋಜನೆಯ ಬಗ್ಗೆ ಅಪಪ್ರಚಾರ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಮಸ್ಕಿ ಮಂಡಲ ವತಿಯಿಂದ ಜನಜಾಗೃತಿ ಕಾರ್ಯಗಾರ ಸಭೆ ಹಾಗೂ ಮತದಾರರ ಪಟ್ಟಿ ಮ್ಯಾಪಿಂಗ್ ಹಾಗೂ ಸಂಘಟನಾತ್ಮಕ ಕುರಿತು ಮಾಜಿ ಶಾಸಕ ಪ್ರತಾಪ್ಗೌಡ ಪಾಟೀಲ್ ಮಾತನಾಡಿದರು.**




ವಿಕಸಿತ ಭಾರತ್ ಜಿ ರಾಮ್ ಜಿ ಹೊಸ ಕಾಯ್ದೆಯಾಗಿದ್ದು, ಇದು 2025ರಲ್ಲಿ ಪರಿಚಯಿಸಲ್ಪಟ್ಟಿದೆ. ಇದು ಗ್ರಾಮೀಣ ಉದ್ಯೋಗವನ್ನು 125 ದಿನಗಳಿಗೆ ಹೆಚ್ಚಿಸಿ, ವಿಕಸಿತ ಭಾರತ 2047 ಗು-ರಿಗೆ ಸಂಯೋಜಿಸುತ್ತದೆ. ಈ ಮಸೂದೆಯ ಮೂಲಕ ರಾಜ್ಯಗಳ ಹಣಕಾಸು ಜವಾಬ್ದಾರಿ ಹೆಚ್ಚಾಗುತ್ತದೆ ಮತ್ತು ತಂತ್ರಜ್ಞಾನ ಆಧಾರಿತ ಪಾರದರ್ಶಕತೆಯನ್ನು ಬಲಪಡಿಸುತ್ತದೆ. ಮುಖ್ಯ ಬದಲಾವಣೆಗಳು ಉದ್ಯೋಗ ಖಾತರಿ 100 ದಿನಗಳಿಂದ 125 ದಿನಗಳಿಗೆ ಏರಿಕೆಯಾಗಿದ್ದು, ವಾರ್ಷಿಕವಾಗಿ ಗ್ರಾಮೀಣ ಕುಟುಂಬಗಳಿಗೆ ಅನ್ವಯಿಸುತ್ತದೆ ಎಂದು ಮಾಜಿ ಶಾಸಕ ಪ್ರತಾಪ್ ಗೌಡ ಪಾಟೀಲ್ ಹೇಳಿದರು. ಈ ವೇಳೆಯಲ್ಲಿ ಬಿಜೆಪಿ ಮಂಡಲ ಅಧ್ಯಕ್ಷರಾದ ಶರಣಬಸವ ಸೊಪ್ಪಿಮಠ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಸಂತೋಷ ರಾಜಗುರು, ಕಾರ್ಯದರ್ಶಿಗಳಾದ ಶಾರದ ರಾಥೋಡ್, ಮುಖಂಡರಾದ ಮಲ್ಲಪ್ಪ ಚಿತ್ತಾಪುರ, ಬಸವಂತರಾಯ ಕುರಿ, ಪುರಸಭೆ ಅಧ್ಯಕ್ಷ ಸುರೇಶ ಅರಸುರು, ಶರಣಬಸವ ವಕೀಲ ಉಮಲೂಟಿ, ಯಲ್ಲೋಜಿರಾವ್ ಕೋರೆಕರ್, ಡಾ ಬಿಹೆಚ್ ದಿವಟರ, ಬಸವರಾಜ್ ಸ್ವಾಮಿ ಹಸ್ಮಕಲ್, ಪ್ರಸನ್ನ ಪಾಟೀಲ್, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಬಸವರಾಜ್ ಗುಡಿಹಾಳ್, ರಮೇಶ್ ಉದ್ಬಾಳ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ದುರ್ಗಪ್ಪ ಗುಡಗುಲ್ದಿನ್ನಿ, ಮಲ್ಲಿಕಾರ್ಜುನ ಯಾದವ್, ಮೌನೇಶ್ ನಾಯಕ್ ವಿವಿಧ ಮೋರ್ಚಗಳ ಅಧ್ಯಕ್ಷರಾದ ಅಮರೇಶ್ ಗುರಿಕಾರ್ ಗೌಡನಬಾವಿ, ವೆಂಕಣ್ಣ ಸಾಹುಕಾರ್ ಗುಂಡ ,ರಮೇಶ್ ನಾಯಕ್ ತೀರ್ಥಭಾವಿ ಹಾಗೂ ಕಾರ್ಯಕರ್ತರು ಭಾಗಿಯಾಗಿದ್ದರು.

# ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್, ಪ್ಯಾರಾ ಮೆಡಿಕಲ್ ಕಾಲೇಜನಲ್ಲಿ ವಿಶ್ವ ಕ್ಯಾನ್ಸರ್ ದಿನ ಆಚರಣೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ವಿಶ್ವ ಕ್ಯಾನ್ಸರ್ ದಿನಾಚರಣೆ ಪ್ರಯುಕ್ತವಾಗಿ ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್, ಪ್ಯಾರ ಮೆಡಿಕಲ್, ಸಿಂಧನೂರು ಇವರ ಆಶ್ರಯದಲ್ಲಿ ವಿಶ್ವ ಕ್ಯಾನ್ಸರ್ ದಿನಾಚರಣೆಯನ್ನು ಯಶಸ್ವಿಯಾಗಿ ಆಚರಿಸಲಾಯಿತು. ಈ ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳು ಕ್ಯಾನ್ಸರ್ ಕುರಿತು ಜನರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ವಿವಿಧ ಮಾಹಿತಿಯುಕ್ತ ಪೋಸ್ಟರ್‌ಗಳನ್ನು ಸಿದ್ಧಪಡಿಸಿದರು.**



ಇದರ ಜೊತೆಗೆ ವಿದ್ಯಾರ್ಥಿಗಳು ಕಿರು ನಾಟಕಗಳ ಮೂಲಕ ಕ್ಯಾನ್ಸರ್ ರೋಗದ ಬಗ್ಗೆ ಜನರಿಗೆ ಜಾಗೃತಿ ಮೂಡಿಸಿದರು. ಈ ಕಿರು ನಾಟಕಗಳಲ್ಲಿ ಕ್ಯಾನ್ಸರ್ ರೋಗದ ಲಕ್ಷಣಗಳು, ಕಾರಣಗಳು, ರೋಗ ಪತ್ತೆ, ರೋಗನಿರ್ಣಯ ಹಾಗೂ ತಡೆಗಟ್ಟುವಿಕೆಯ ಮಹತ್ವವನ್ನು ಸುಲಭವಾಗಿ ಅರ್ಥ-ವಾಗುವ ರೀತಿಯಲ್ಲಿ ಪ್ರದರ್ಶಿಸಲಾಯಿತು. ಈ ಪೋಸ್ಟರ್‌ಗಳು ಹಾಗೂ ಕಿರು ನಾಟಕಗಳ ಮೂಲಕ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ಕ್ಯಾನ್ಸರ್ ಕುರಿತು ಸಮಗ್ರ ಮಾಹಿತಿ ನೀಡಲಾಯಿತು. ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾ-ರಿಗಳು, ತಾಲೂಕು ಆರೋಗ್ಯ ಕಚೇರಿ, ಸಿಂಧನೂರು ಇವರನ್ನು ವಿಶೇಷ ಉಪನ್ಯಾಸಕರಾಗಿ ಆಹ್ವಾನಿಸಲಾಗಿದ್ದು, ಅವರು ಕ್ಯಾನ್ಸರ್ ರೋಗದ ತಡೆಗಟ್ಟುವಿಕೆ, ಆರಂಭಿಕ ಪತ್ತೆಯ ಮಹತ್ವ ಹಾಗೂ ಆರೋಗ್ಯಕರ ಜೀವನಶೈಲಿಯ ಅಗತ್ಯತೆ ಕುರಿತು ವಿಶೇಷ ಉಪನ್ಯಾಸವನ್ನು ನೀಡಿದರು. ಕಾರ್ಯಕ್ರಮವನ್ನು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಇಸಾಕ್ ಅತ್ತಾರ್ ಅವರು ವಹಿಸಿದ್ದರು. ಉದ್ಘಾಟಕರಾಗಿ ಶ್ರೀಮತಿ ಗೀತಾ ಹಿರೇಮಠ್ ಅವರು ಉಪಸ್ಥಿತರಿದ್ದರು. ಅತಿಥಿಯಾಗಿ ಶ್ರೀ ಲಾಜರ್ ಸಿರಿಲ್ ಅವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಎಲ್ಲಾ ವಿಭಾಗಗಳ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಈ ಕಾರ್ಯಕ್ರಮವು ಕ್ಯಾನ್ಸರ್ ಕುರಿತು ಸಮಾಜದಲ್ಲಿ ಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿತು.

# ನಾಳೆ ಫೆ.6 ರಂದು ಶ್ರೀ ಗ್ರಾಮದೇವಿ ಜಾತ್ರಾ ಮಹೋತ್ಸವ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಸಮೀಪದ ಹಡಗಿನಾಳ ಗ್ರಾಮದ ಶ್ರೀ ಗ್ರಾಮ ದೇವತೆಯ ಜಾತ್ರಾ ಮಹೋತ್ಸವ ನಾಳೆ ಫೆಬ್ರವರಿ 6 ರಂದು ಜರುಗಲಿದೆ. ಜಾತ್ರೆಯ ಅಂಗವಾಗಿ ಫೆಬ್ರವರಿ ಆರರಂದು ಬೆಳಿಗ್ಗೆ 6-00 ಘಂಟೆಗೆ ಸಂಗಮೇಶ್ವರ ದೇವಸ್ಥಾನದಿಂದ ಶ್ರೀ ಗ್ರಾಮದೇವತೆ ದೇವಸ್ಥಾನದವರೆಗೆ ಕುಂಭ ಕಳಸದ ಮೆರವಣಿಗೆಯು ಡೊಳ್ಳು ಕುಣಿತ ಕರಡಿಮಜಲು ಹಾಗೂ ಸಕಲ ವಾದ್ಯ ಮೇಳಗಳೊಂದಿಗೆ ನಡೆಯುವುದು.**




ಅಂದೆ ಮಧ್ಯಾಹ್ನ 12 ಘಂಟೆಯಿಂದ ರಾತ್ರಿ 10:00 ಘಂಟೆ ವರೆಗೆ ಮಹಾಪ್ರಸಾದ ಇರುವುದು. ರಾತ್ರಿ 8-00 ಘಂಟೆಗೆ ವೇದಿಕೆ ಕಾರ್ಯಕ್ರಮ ಇರುವುದು ಇದರ ಸಾನಿಧ್ಯವನ್ನು ಖಾಸ್ಗತೇಶ್ವರ ಮಠದ ಪೂಜ್ಯ ಶ್ರೀ ಸಿದ್ದಲಿಂಗ ದೇವರು ಹಾಗೂ ಸರೂರ ಹಾಲುಮತ ಗುರುಪೀಠದ ಪೂಜ್ಯಶ್ರೀ ಸಿದ್ದಯ್ಯ ಮಹಾಸ್ವಾಮಿಗಳು ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ, ಶಾಸಕರಾದ ಅಪ್ಪಾಜಿ ನಾಡಗೌಡ, ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ ಎ.ಎಸ್. ಪಾಟೀಲ(ನಡಹಳ್ಳಿ), ವಿಡಿಸಿಸಿ ಬ್ಯಾಂಕ್ ನಿರ್ದೇಶಕ ಬಿ.ಎಸ್ ಪಾಟೀಲ(ಯಾಳಗಿ), ಜಿ.ಪಂ. ಮಾಜಿ ಸದಸ್ಯರಾದ ನಿಂಗಪ್ಪ ಬಪ್ಪರಗಿ, ಪ್ರಭುಗೌಡ ದೇಸಾಯಿ, ಬಿಜೆಪಿ ಮುಖಂಡ ಆರ್ ಎಸ್ ಪಾಟೀಲ (ಕೂಚಬಾಳ), ಕಾಂಗ್ರೆಸ್ ಮುಖಂಡರಾದ ಸಿ.ಬಿ.ಅಸ್ಕಿ, ಶಾಂತಗೌಡ ನಡಹಳ್ಳಿ, ಸುರೇಶ ಧಣಿ ಬಿಂಜಲಭಾವಿ, ಸಿದ್ದನಗೌಡ ಪಾಟೀಲ(ನಾವದಗಿ), ಪ್ರಭುಗೌಡ ಮದರಕಲ್ಲ,ಶರಣು ಧಣಿ ದೇಶಮುಖ, ಹಾಲುಮತ ಸಮಾಜದ ತಾಲೂಕ ಅಧ್ಯಕ್ಷ ಎನ್.ಎಂ.ಮದರಿ, ಕಾಂಗ್ರೆಸ್ ಪ್ರಚಾರ ಸಮಿತಿ ತಾಲೂಕಾಧ್ಯಕ್ಷ ವೀರೇಶಗೌಡ ಬಾಗೇವಾಡಿ ಹಾಗೂ ಅತಿಥಿಗಳಾಗಿ ಮೂಕಿಹಾಳ ಗ್ರಾಪಂ ಅಧ್ಯಕ್ಷ ಆರ್. ಎಚ್.ಮೇಟಿ, ಉಪಾಧ್ಯಕ್ಷೆ ಬೋರಮ್ಮ ಎನ್ ದೇಸಾಯಿ, ಹರನಾಳ ಪಿಕೆಪಿಎಸ್ ಅಧ್ಯಕ್ಷ ಕಾಶೀಮಪಟೇಲ ಪಾಟೀಲ, ಯುವ ಮುಖಂಡ ಶಿವರಾಜ ಗುಂಡಕನಾಳ, ಗುತ್ತಿಗೆದಾರ ಶರಣಗೌಡ ನಾಗರೆಡ್ಡಿ, ಸಂಗನಗೌಡ ಅಸ್ಕಿ, ಪಿಕೆಪಿಎಸ್ ಸದಸ್ಯ ಕಾಶಿನಾಥ ದೇಸಾಯಿ ಆಗಮಿಸುವರು. ರಾತ್ರಿ 10.30 ಗಂಟೆಗೆ ಹಂಚಿನಾಳ ಶ್ರೀ ಕುಮಾರೇಶ್ವರ ನಾಟ್ಯ ಸಂಘದಿಂದ ಮಾತು ಬಿದ್ದಿತು ಮೌನ ಗೆದ್ದಿತು ನಾಟಕ ಹಾಗೂ ಫೆ.8 ರಂದು ರಾತ್ರಿ 9-00 ಘಂಟೆಗೆ ಶ್ರೀ ಬಸವೇಶ್ವರ ಬಯಲಾಟ ಸಂಘ ರಬಿನಾಳ ಇವರಿಂದ ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಇವರ ಕುರಿತು ಬೈಲಾಟ ಜಾತ ಇರುವುದು. ಫೆಬ್ರವರಿ 10 ರಂದು ಬೆಳಿಗ್ಗೆ 10:00 ಗಂಟೆಗೆ ಗ್ರಾಮ ದೇವತೆ ಗರ್ಭಗುಡಿಯ ಪ್ರವೇಶ ಕಾರ್ಯಕ್ರಮ ನಡೆಯುವುದು.

## ನೇಮಕಾತಿ ಪ್ರಕಟಣೆ

ರೈಲ್ವೆ ನೇಮಕಾತಿ ಮಂಡಳಿಯು ಇತ್ತೀಚೆಗೆ ಲೆವೆಲ್ 1 (ಗ್ರೂಪ್ ಡಿ) ಹುದ್ದೆಗಳಿಗೆ 22195 ಅರ್ಹ ಮತ್ತು ಸಮರ್ಥ ಆಕಾಂಕ್ಷಿಗಳನ್ನು ನೇಮಿಸಿಕೊಳ್ಳಲು ಉದ್ಯೋಗ ಅಧಿಸೂಚನೆಯನ್ನು ಬಿಡುಗಡೆ ಮಾಡಿದೆ. ಆರ್‌ಆರ್‌ಬಿಯಲ್ಲಿ ಸರ್ಕಾರಿ ಉದ್ಯೋಗಗಳನ್ನು ಹುಡುಕುತ್ತಿರುವ ಅಭ್ಯರ್ಥಿಗಳು ಕೊನೆಯ ದಿನಾಂಕದ ಮೊದಲು (ಏಪ್ರಿಲ್ 2, 2026) ಅಧಿಕೃತ ವೆಬ್‌ಸೈಟ್ www.rrbapply.gov.in ಮೂಲಕ ಆನ್‌ಲೈನ್ ಅರ್ಜಿ ನಮೂನೆಯನ್ನು ಸಲ್ಲಿಸುವ ಮೂಲಕ ಈ ನೇಮಕಾತಿ ಅಧಿಸೂಚನೆಗೆ ಅರ್ಜಿ ಸಲ್ಲಿಸಬಹುದು. Railway recruitment 2026: 22,000 ಕ್ಕೂ ಹೆಚ್ಚು ರೈಲ್ವೆ ಗ್ರೂಪ್ ಡಿ ಹುದ್ದೆಗಳಿಗೆ ಬಂಪರ್ ನೇಮಕಾತಿ ಪ್ರಾರಂಭವಾಗಿದೆ 10 ನೇ ತರಗತಿ ಮತ್ತು ಐಟಿಐ ಪಾಸಾದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು More Details https://t.ly/0hJ2v ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಆರಂಭಿಕ ದಿನಾಂಕ: 31–01–2026. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 02–03–2026. ಅಧಿಕೃತ ವೆಬ್‌ಸೈಟ್: www.rrbapply.gov.in

## ರಾಷ್ಟ್ರೀಯ ಫ್ಲೋರೋಸಿಸ್ ತಡೆ ಮತ್ತು ನಿಯಂತ್ರಣ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ್ ಪ್ರಾಥಮಿಕ ಆರೋಗ್ಯ ಕೇಂದ್ರ ರಾಗಲಪರ್ವಿ ಇವರ ಸಂಯುಕ್ತ ಆಶ್ರಯದಲ್ಲಿ ಬುದ್ದಿನ್ನಿ ಗ್ರಾಮದಲ್ಲಿ ರಾಷ್ಟ್ರೀಯ ಫ್ಲೋರೋಸಿಸ್ ತಡೆ ಮತ್ತು ನಿಯಂತ್ರಣ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು ಈ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ಮಾಡಲಾಯಿತು.**



ಈ ಕಾರ್ಯಕ್ರಮದಲ್ಲಿ ಫ್ಲೋರೊಸಿಸ್ ಜಾಗೃತಿ ಕಾರ್ಯಕ್ರಮ ಹಾಗೂ ಫ್ಲೋರೋಸಿಸ್ ಉಚಿತ ತಪಾಸಣಾ ಕಾರ್ಯಕ್ರಮವನ್ನು ಹಮ್ಮಿಕೊಂಡು ಅದು ಮತ್ತು ಸಾರ್ವಜನಿಕರಿಗೆ ಆರೋಗ್ಯವನ್ನು ತಪಾಸಣೆ ಮಾಡಲಾಯಿತು .ಫ್ಲೋರೋಸಿಸ್ ಎಂದರೆ ಇದೊಂದು ದೀರ್ಘಕಾಲಿಕ ಕಾಯಿಲೆಯಾಗಿದ್ದು ಇದು ಚಯಪಚಯ ಕಾಯಿಲೆಯಾಗಿದ್ದು ಇದು ಅಂತರಜಲ ಫ್ಲೋರೇಡ್ ಅಂಶ ಜಾಸ್ತಿ ಇರುವ ನೀರು ಕುಡಿಯುವ ಮೂಲಕ ಬರುವ ಕಾಯಿಲೆಯಾಗಿದೆ ಎಂದು ಡಾ. ಶ್ವೇತಾಂಬರಿ ಆಯುಷ್ ವೈದ್ಯಾಧಿಕಾರಿಗಳು ಮಾತನಾಡಿದರು. ನಂತರ ಗುರುಪ್ರಸಾದ್ ಫ್ಲೋರೋಸಿಸ್ ರಾಯಚೂರು ಇವರು ಮಾತನಾಡಿ ಫ್ಲೋರೋಸಿಸ್ ತಡೆ ಹಾಗೂ ಲಕ್ಷಣಗಳು ನಿಯಂತ್ರಣದ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಿದರು ನಂತರ ಡಾ. ಅಫ್ರೋಜಾ ಬಾನು ದಂತ ವೈದ್ಯರು ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೆರ ಇವರು ಮಾತನಾಡಿ ಮಕ್ಕಳಲ್ಲಿ ದಂತ ಫ್ಲೋರೋಸಿಸ್ ಬರುವುದು ಹೆಚ್ಚು ಸರ್ವಸಾಮಾನ್ಯ ನೀರು ಕುಡಿಯುವ,

ಅನೇಕ ರೀತಿಯ ಪಾನೀಯ ಕುಡಿಯುದು, ಜಂಕ್ ಫುಡ್ ಸೇವನೆ ಮೂಲಕ ಆಹಾರ ಪದ್ಧತಿ ಬದಲಾವಣೆ ಮತ್ತು ಪೇಸ್ಟ್ ಬಳಸುವುದು ಕಡಿಮೆ ಮಾಡಿದಾಗ ಇದನ್ನು ತಡೆಯುವ ಸಾಧ್ಯತೆ ಇರುತ್ತದೆ ಎಂದರು ತದನಂತರ ಗೀತಾ ಹಿರೇಮಠ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರು ಮಾತನಾಡಿ ಫ್ಲೋರೋಸಿಸ್ ಅಲ್ಲಿ ಮೂರು ತರದ ಕಾಯಿಲೆಗಳು ದಂತ ಫ್ಲೋರೋಸಿಸ್ ಮೂಳೆ ಫ್ಲೋರೋಸಿಸ್ ಬರುವುದು ಇದನ್ನು ತಡೆಯುವುದು ಎ ಅನ್ನಂಗ ಸಿ ಅನ್ನಂಗ ಪೋಷಕಾಂಶಗಳಿರುವ ಆಹಾರವು ಸೇವನೆಯನ್ನು ಮಾಡುವುದು ಸೂಕ್ತ ಚಿಕಿತ್ಸೆ ಪಡೆದುಕೊಳ್ಳುವುದು ಸರಿಯಾದ ಕ್ರಮವಾಗಿದೆ ಎಂದು ಹೇಳಿದರು.

ಸ್ಪರ್ಶ್ ಕುಷ್ಟರೊಗ ಜಾಗೃತಿ ಅಭಿಯಾನ, ರಾಯಚೂರು ಉತ್ಸವ ದ ಕುರಿತು ಹೇಳಲಾಯಿತು,ಸದರಿ ಕಾರ್ಯಕ್ರಮದಲ್ಲಿ, ಶಿವಪ್ಪ ಪಂಚಾಯತ್ ಸದಸ್ಯರು, ಗಂಗಾಧರ್ ಎಲ್ ಟಿ ಓ,ರಾಯಚೂರ್, ಸಿ,ಎಚ್,ಓ ಅಧಿಕಾರಿಗಳಾದ ರಾಜಕುಮಾರ ಹಾಗೂ ಜಯ, ಪಕೀರಚಂದ್ ಸೀನಿಯರ್ ಎಚ್ ಐ ಓ, ಶರಣಮ್ಮ ಎಚ್‌ಐಓ, ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿಗಳಾದ ಗಂಗಮ್ಮ ಅಂಬಮ್ಮ ಅಂಗನವಾಡಿ ಕಾರ್ಯಕರ್ತರು ಆಶಾ ಕಾರ್ಯಕರ್ತೆಯರು ಅಂಗನವಾಡಿ ಸಹಾಯಕಿ, ಹಿರಿಯ ನಾಗರಿಕರು ಉಪಸ್ಥಿತರಿದ್ದರು.

### ಫೆ.6ರಂದು ರಾಯಚೂರು ಉತ್ಸವದ ಅಂಗವಾಗಿ ಸಂಗ್ರಾಣಿ ಕಲ್ಲು, ಉಸುಕಿನ ಮೂಟೆ ಎತ್ತುವ ಸ್ಪರ್ಧೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಫೆಬ್ರವರಿ 04 (ಕರ್ನಾಟಕ ವಾರ್ತೆ): ಎಡೆದೊರೆ ನಾಡು ರಾಯಚೂರು ಉತ್ಸವದ ಕಾರ್ಯಕ್ರಮ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಜಿಲ್ಲೆಯ ಇತರೆ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಫೆ.6ರ ಬೆಳಿಗ್ಗೆ 11ರಿಂದ ಮಧ್ಯಾಹ್ನ 2ರವರೆಗೆ ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಸಂಗ್ರಾಣಿ ಕಲ್ಲು, ಉಸುಕಿನ ಮೂಟೆ ಎತ್ತುವುದು ಹಾಗೂ ಕುಸ್ತಿ ಕ್ರೀಡೆಗಳ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ.**

ಭಾಗವಹಿಸುವ ಆಸಕ್ತ ಕ್ರೀಡಾಪಟುಗಳು ಸಂಘಟಕರಾದ ಮಹಾದೇವ ಮೊಬೈಲ್ ಸಂಖ್ಯೆ: 9900188545, ಅಮಿತ್ ಸಿ.ಜೆ.: 6360828618, ಹನುಮಂತ: 7090307353 ಇವರನ್ನು ಸಂಪರ್ಕಿಸಿ ಬೆಳಿಗ್ಗೆ 9 ಗಂಟೆಯೊಳಗೆ ಸಂಘಟಕರಿಗೆ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ ರಾಯಚೂರು ಇವರನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಫೆ.7ರಂದು ಎಐಸಿಸಿಟಿಯು, ಆಯಲ್ರ್ಾ ಜಿಲ್ಲಾ ಸಮಾವೇಶ: ಪೋಸ್ಟರ್ ಬಿಡುಗಡೆ

❑ ನೈಜ್ಯ ದೆಸೆ ನ್ಯೂಸ್

**ಫೆ.12ರಂದು ಜೆಸಿಟಿಯು ಕರೆ ನೀಡಿರುವ ರಾಷ್ಟ್ರೀಯ ಮುಷ್ಕರದ ಅಂಗವಾಗಿ ನಗರದ ಎಪಿಎಂಸಿ ರೈತ ಭವನದಲ್ಲಿ ಎಐಸಿಸಿಟಿಯು ಹಾಗೂ ಆಯಲ್ರ್ಾ ರಾಯಚೂರು ಜಿಲ್ಲಾಮಟ್ಟದ ಸಮಾವೇಶ ಫೆ.7ರಂದು ಹಮ್ಮಿಕೊಳ್ಳಲಾಗಿದ್ದು, ಸಂಘಟನೆಯ ಮುಖಂಡರು ಪ್ರವಾಸಿ ಮಂದಿರದ ಆವರಣದಲ್ಲಿ ಬುಧವಾರ ಪೋಸ್ಟರ್ ಬಿಡುಗಡೆ ಮಾಡಿದರು.**




ಈ ವೇಳೆ ಮಾತನಾಡಿದ ಎಐಸಿಸಿಟಿಯು ರಾಜ್ಯ ಸಹ ಕಾರ್ಯದರ್ಶಿ ನಾಗರಾಜ್ ಪೂಜಾರ್, ಕೇಂದ್ರ ಸರ್ಕಾರವು ಕಾರ್ಮಿಕರಿಗೆ ಮಾರಕವಾಗಿರುವ 4 ಕಾರ್ಮಿಕ ಸಂಹಿತೆಗಳು ಜಾರಿಗೆ ತಂದಿದೆ. ಅಷ್ಟೇ ಅಲ್ಲದೇ ಮಹಾತ್ಮಾ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯನ್ನು ಬದಲಿಸಿ ವಿಬಿ–ಗ್ರಾಮಜೀ 2025 ಮಸೂದೆಯನ್ನು ಜಾರಿಗೊಳಿಸುವ ಮೂಲಕ ಜನಸಾಮಾನ್ಯರ ಶಾಸನಬದ್ಧ ಉದ್ಯೋಗದ ಹಕ್ಕನ್ನು ಕೇಂದ್ರ ಸರ್ಕಾರ ಕಸಿದುಕೊಂಡಿದೆ. ಈ ಹಿನ್ನೆಲೆಯಲ್ಲಿ ಜೆಸಿಟಿಯು ಸಂಘಟನೆಗಳು ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಕರೆ ನೀಡಿದ್ದು, ಈ ಮುಷ್ಕರದಲ್ಲಿ ದುಡಿಯುವ ಜನತೆ ಭಾಗವಹಿಸಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ: ಎಐಸಿಸಿಟಿಯು ಜಿಲ್ಲಾ ಅಧ್ಯಕ್ಷ ಅಜೀಜ್ ಜಾಗೀದಾರ, ತಾಲೂಕು ಕಾರ್ಯದರ್ಶಿ ಬಸವರಾಜ ಬೆಳಗುರ್ಕಿ, ಆಯಲ್ರ್ಾ ಸಂಚಾಲಕ ಆರ್. ಎಚ್ ಕಲಮಂಗಿ, ಭಗತ್ ಸಿಂಗ್ ಆಟೋ ಚಾಲಕರ ಸಂಘದ ಅಧ್ಯಕ್ಷ ಬಸವರಾಜ ಕೊಂಡೆ, ಹುಸೇನಪ್ಪ ಅರಹಳ್ಳಿ, ಕಂಟೆಪ್ಪ, ವಿರೇಶ ನಾಯಕ್, ಮೌನೇಶ ಕವಿತಾಳ, ಮಹಾದೇವ ಅಮರಾಪುರ, ಸೇರಿದಂತೆ ಇತರರು ಇದ್ದರು.

### ಫೆ.5ರಂದು ಮಧ್ಯಾಹ್ನ 1 ಗಂಟೆಯಿಂದ ಕರ್ನಾಟಕ ಸಂಘದಿಂದ ಮೆರವಣಿಗೆ, ಬೈಕ್ ರ‍್ಯಾಲಿ ವಿಶೇಷ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ನಿಮಿತ್ತ ಫೆ.5ರಂದು ಮಧ್ಯಾಹ್ನ 1 ಗಂಟೆಗೆ ಕರ್ನಾಟಕ ಸಂಘದಿಂದ ಉತ್ಸವದ ಜಾಥಾ ಮತ್ತು ಬೈಕ್ ರ?ಯಾಲಿ ಕಾರ್ಯಕ್ರಮ ನಡೆಯಲಿದ್ದು, ಮೆರವಣಿಗೆಯು ಕರ್ನಾಟಕ ಸಂಘದಿಂದ ಆರಂಭವಾಗಿ ಬಂಗಾರ ಬಜಾರ್, ಡಾ.ಬಿ.ಆರ್. ಅಂಬೇಡ್ಕರ್ ವೃತ್ತ, ಬಸವೇಶ್ವರ ವೃತ್ತದ ಮಾರ್ಗವಾಗಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದವರೆಗೆ ಸಂಚರಿಸಲಿದೆ.**

ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಬೈಕ್ ರ‍್ಯಾಲಿ ನಡೆಯಲಿದೆ. ಈ ಮೆರವಣಿಗೆಯಲ್ಲಿ ವೀರಗಾಸೆ, ಹಗಲುವೇಷ, ಚಿಲಿಪಿಲಿ ಗೊಂಬೆ, ಕೀಲುಕುದುರೆ, ಜಾಂಜಮೇಳ, ಹಗಲುವೇಷ, ಕಣಿಹಲಗೆ, ಡೊಳ್ಳುಕುಣಿತ, ತಾಷಾರೊಂಡಾಲಾ, ಶಹನಾಯಿ ವಾದನ, ಲಂಬಾಣಿ ನೃತ್ಯ, ಕೊಂಬುಕಹಳೆ, ಗೊರವ ಕುಣಿತ, ತಮಟೆವಾದನ, ನಾಸಿಕಡೊಳ್ಳು, ಮಹಿಳಾ ಡೊಳ್ಳು, ಕಹಳೆವಾದನ, ಸೋಮನಕುಣಿತ, ನಂದಿಧ್ವಜ ಮತ್ತು ಸಮಾಳ, ಭದ್ರಕಾಳಿ ಕುಣಿತ, ಸತ್ತೀಗೆ ಕುಣಿತ, ಜಗ್ಗಲಗಿ, ಕೋಳಿ ಕುಣಿತ, ಕರಡಿ ಮಜಲು ಸೇರಿದಂತೆ ನಾನಾ ಕಲಾಪ್ರಕಾರ ಕಲಾವಿದರು ಮೆರವಣಿಗೆಯಲ್ಲಿ ಭಾಗವಹಿಸಿ ಮೆರವಣಿಗೆಯ ಕಳೆ ಹೆಚ್ಚಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಕೌಟುಂಬಿಕ ಕಲಹ ಯುವಕ ದೂದ್ ಪಾಷಾ ನೇಣಿಗೆ ಶರಣು

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು ನಗರದ ಮಹಿಬೂಬ್ ಕಾಲೋನಿಯ ಬಾಡಿಗೆ ಮನೆಯಲ್ಲಿ ಯುವಕನೊರ್ವ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ.**



ಏಳುರಾಗಿ ಕ್ಯಾಂಪ್ ನಿವಾಸಿ ದೂದ್ ಪಾಷಾ(25) ಮೃತ ಯುವಕನಾಗಿದ್ದು, ಇತ್ತೀಚೆಗೆ ಸಿಂಧನೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದನು ಎಂದು ತಿಳಿದು ಬಂದಿದೆ. ಕೌಟುಂಬಿಕ ಕಲಹ ಹಿನ್ನೆಲೆ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದ್ದು, ಈ ಕುರಿತು ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ಘಟನೆಯ ಮಾಹಿತಿಯು ತಿಳಿಯುತ್ತಿದ್ದಂತೆ ಸಿಂಧನೂರು ನಗರ ಪೊಲೀಸ್ ಠಾಣೆಯ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರು.

ಪೊಲೀಸರು ಮೃತನ ವಾಸ ಸ್ಥಳವನ್ನು ಅಗತ್ಯ ದಾಖಲೆಗಳನ್ನು ಸಂಗ್ರಹಿಸಿ ಪ್ರಕರಣ ದಾಖಲಿಸಿ ಕೊಂಡಿದ್ದಾರೆ. ಬಳಿಕ ಘಟನಾ ಸ್ಥಳಕ್ಕೆ ಸಿಪಿಐ ಹಾಗೂ ಡಿವೈಎಸ್ಪಿ ಭೇಟಿ ನೀಡಿ, ಅಧಿಕಾರಿಗಳಿಂದ ಮಾಹಿತಿ ಪಡೆದು ತನಿಖೆಗೆ ಮಾರ್ಗದರ್ಶನ ನೀಡಿದರು. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ನಗರದ ಸಾರ್ವಜನಿಕ ಆಸ್ಪತ್ರೆಯ ಶವಗಾರಕ್ಕೆ ರವಾನೆ ಮಾಡಲಾಗಿದೆ. ಈ ಘಟನೆ ಸಿಂಧನೂರು ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಆತ್ಮಹತ್ಯೆಗೆ ನಿಖರ ಕಾರಣ ತಿಳಿಯಲು ಪೊಲೀಸರು ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ.

## ಮಸ್ಕಿಯಲ್ಲಿ ಮಾಜಿ ಶಾಸಕ ಪ್ರತಾಪಗೌಡ ಪಾಟೀಲರಿಂದ ಸುದ್ದಿಗೋಷ್ಠಿ




❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಭಾರತದ ಗ್ರಾಮೀಣ ಉದ್ಯೋಗ ನೀತಿಯಲ್ಲಿ ಕ್ರಾಂತಿಕಾರಿ ಬದಲಾವಣೆ ತರುವ ಉದ್ದೇಶದಿಂದ ಕೇಂದ್ರ ಸರ್ಕಾರವು 2005ರ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ (ನರೇಗಾ)ಯನ್ನು ರದ್ದುಗೊಳಿಸಿ, ಅದರ ಬದಲಿಗೆ ವಿಕಸಿತ ಭಾರತ ರೋಜ್‌ಗಾರ್ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ) ಅಥವಾ ವಿಬಿ–ಜಿ ರಾಮ್–ಜಿ ಕಾಯ್ದೆ 2025ನ್ನು ಜಾರಿಗೆ ತಂದಿದೆ ಎಂದು ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್ ಹೇಳಿದರು.**

ಮಸ್ಕಿ ಪಟ್ಟಣದ ಪತ್ರಿಕಾ ಭವನದಲ್ಲಿ ಬುಧವಾರ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರಪತಿಗಳ ಅಂಕಿತ ಪಡೆದಿರುವ ಈ ಹೊಸ ಕಾಯ್ದೆಯು ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುವುದರ ಜೊತೆಗೆ 'ವಿಕಸಿತ ಭಾರತ' ನಿರ್ಮಾಣದ ಗುರಿಯನ್ನು ಹೊಂದಿದೆ ಎಂದರು. ಕೆಲಸ ಕೇಳಿದ ದಿನದಿಂದ 15 ದಿನಗಳೊಳಗೆ ಉದ್ಯೋಗ ನೀಡದಿದ್ದರೆ ರಾಜ್ಯ ಸರ್ಕಾರಗಳು ಕಡ್ಡಾಯವಾಗಿ ನಿರುದ್ಯೋಗ ಭತ್ಯೆ ನೀಡಬೇಕು ಎಂಬ ಮಹತ್ವದ ಅಂಶವನ್ನು ಕಾಯ್ದೆಯಲ್ಲಿ ಸೇರಿಸಲಾಗಿದೆ. ಈ ಹೊಸ ಕಾಯ್ದೆಯಡಿ ಗ್ರಾಮೀಣ ಭಾಗದ ಪ್ರತಿ ಕುಟುಂಬಕ್ಕೆ ವರ್ಷಕ್ಕೆ ಕನಿಷ್ಠ 125 ದಿನಗಳ ಉದ್ಯೋಗ ಖಾತರಿ ನೀಡಲಾಗುತ್ತದೆ ಎಂದು ತಿಳಿಸಿದರು. ಈ ಹಿಂದೆ ನರೇಗಾ ಯೋಜನೆಯಲ್ಲಿ ಕೇವಲ 100 ದಿನಗಳ ಉದ್ಯೋಗ ಮಿತಿ ಇದ್ದು,

ಇದೀಗ ಅದನ್ನು ಹೆಚ್ಚಿಸಿರುವುದು ಗ್ರಾಮೀಣ ಕುಟುಂಬಗಳ ಆರ್ಥಿಕ ಭದ್ರತೆಗೆ ದೊಡ್ಡ ಬಲ ನೀಡಲಿದೆ ಎಂದರು. ವಿಬಿ–ಜಿ ರಾಮ್ ಜಿ ಯೋಜನೆ ಕೇಂದ್ರ ಪುರಸ್ಕೃತ ಮಾದರಿಯಲ್ಲಿ ಜಾರಿಯಾಗಿದ್ದು, 60:40 ಅನುಪಾತದಲ್ಲಿ ವೆಚ್ಚ ಹಂಚಿಕೆ ಮಾಡಲಾಗುತ್ತದೆ ಎಂದು ಅವರು ಹೇಳಿದರು. ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂತೋಷ ರಾಜಗುರು, ಬಿಜೆಪಿ ಮಂಡಲ ಅಧ್ಯಕ್ಷ ಶರಣಬಸವ ಸೊಪ್ಪಿಮಠ, ಪುರಸಭೆ ಅಧ್ಯಕ್ಷ ಸುರೇಶ ಹರಸೂರು, ಬಸವಂತರಾಯ ಕುರಿ ಇದ್ದರು.

### ಫೆ.5ರಂದು ಜಗಜ್ಯೋತಿ ಬಸವೇಶ್ವರ ಆಡಿಟೋರಿಯ ಸಭಾಂಗಣದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ನಿಮಿತ್ತ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಆವರಣದಲ್ಲಿ ಶ್ರೀ ಜಗಜ್ಯೋತಿ ಬಸವೇಶ್ವರ ಆಡಿಟೋರಿಯಂ ಸಭಾಂಗಣದಲ್ಲಿ ಬೆಳಗ್ಗೆ 11ರಿಂದ ಸಂಜೆ 7 ಗಂಟೆವರೆಗೆ ವಿವಿಧ ಸಾಂಸ್ಕೃತಿ ಕಾರ್ಯಕ್ರಮಗಳು ನಡೆಯಲಿವೆ.**


ಬೆಳಗ್ಗೆ 11 ಗಂಟೆಗೆ ಆರಂಭವಾಗುವ ಈ ಸಭಾಂಗಣದಲ್ಲಿ ಬೂದಯ್ಯ ಯಾದಗಿರಿ ಅವರಿಂದ ಸುಗಮ ಸಂಗೀತ, ಯಂಕನಗೌಡ ದಿದ್ದಿಗಿ ಅವರಿಂದ ಭಕ್ತಿಗೀತೆ, ಅಲ್ಲಭಕ್ಷಿ ಸಿಂಧನೂರು ಅವರಿಂದ ಜನಪದ ಗಾಯನ, ಬಸವರಾಜ ದಿನ್ನಿ ಅವರಿಂದ ದಾಸರ ಪದಗಳು, ಚೈತ್ರಮ್ಮ ಮಾಟುರ ಅವರಿಂದ ಸಂಪ್ರದಾಯ ಪದಗಳು, ಜಯಸಿಂಹ ಪೇರೂರ ಅವರಿಂದ ಸಂಗೀತ ಗಾಯನ, ಸುಜಾತ ಜೋಷಿ ಅವರಿಂದ ದಾಸವಾಣಿ, ಶ್ರೀನಿವಾಸ ಸಿಗ್ನೆಚರ್ ಡ್ಯಾನ್ಸ್ ಗ್ರೂಪ್ ರಾಯಚೂರು ಅವರಿಂದ ಸಮೂಹ ನೃತ್ಯ, ಬಸಮ್ಮ ಜಾಲಿಹಾಳ ಅವರಿಂದ ಪಾರಿಜಾತ ಭಜನೆ, ಸಂಗೀತ, ಶರಣಮ್ಮ ಉಪಲದೊಡ್ಡಿ ಅವರಿಂದ ಸಂಪ್ರದಾಯ ಪದಗಳು, ಹನುಮಮ್ಮ ಬಸಪೂರ ಕೆ. ರಾಯಚೂರು ಅವರಿಂದ ಸೋಬಾನೆ ಪದಗಳು, ವಿಶ್ವನಾಥ ರಾಯಚೂರು ಅವರಿಂದ ಜನಪದ ಗೀತೆ, ನಟರಾಜ ರಾಯಚೂರು ಅವರಿಂದ ಸ್ಯಾಕ್ಸೋಫೋನ್, ದೇವರಾಜ ಡಿ. ಬೆಂಗಳೂರು ಅವರಿಂದ ಕಥಾ ಕೀರ್ಥನ, ಲಕ್ಷ್ಮಣ ಕೊಪ್ಪರ ಅವರಿಂದ ಭಕ್ತಿಗೀತೆ, ನರಸಿಂಹಲು ಮರ್ಚೆಡ್ ಅವರಿಂದ ಹಂತಿಪದಗಳು, ಅಕ್ಷಯ ಜೋಷಿ ಲಿಂಗಸೂಗೂರು ಅವರಿಂದ ತಬಲಾವಾದನ ಸೋಲೋ, ಪ್ರಭಾ ಕೆ. ಕಂಬಾರ ಅವರಿಂದ ಸುಗಮ ಸಂಗೀತ, ಅನ್ನಪೂರ್ಣಬಾಯಿ ರಾಯಚೂರು ಅವರಿಂದ ಭಕ್ತಿಗೀತೆಗಳು ನಡೆಯಲಿವೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ರಾಯಚೂರು ಜಿಲ್ಲಾ ಉತ್ಸವ: ಜನಸಾಗರದ ನಿರೀಕ್ಷೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: 'ಜಿಲ್ಲಾಡಳಿತದ ವತಿಯಿಂದ ನಗರದಲ್ಲಿ ಫೆ.5ರಿಂದ 7 ರವರೆಗೆ ನಡೆಯಲಿರುವ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಮೂರು ದಿನಗಳ ಉತ್ಸವದಲ್ಲಿ ಒಂದು ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆ ಇದೆ' ಎಂದು ಜಿಲ್ಲಾಧಿಕಾರಿ ನಿತೀಶ್ ತಿಳಿಸಿದರು.ಮೊದಲ ದಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ರೀಡಾಂಗಣದಲ್ಲಿ ಉತ್ಸವಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಲನೆ ನೀಡಲಿದ್ದಾರೆ' ಎಂದು ನಗರದಲ್ಲಿ ಮಂಗಳವಾರ ಮಾಧ್ಯಮ ಗೋಷ್ಠಿಯಲ್ಲಿ ಮಾಹಿತಿ ನೀಡಿದರು.**




'ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ಕೃಷಿ ಸಚಿವ ಎನ್.ಚಲುವರಾಯ ಸ್ವಾಮಿ ಪಾಲ್ಗೊಳ್ಳುವರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣಪ್ರಕಾಶ ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ' ಎಂದು ತಿಳಿಸಿದರು. 'ಸಂಸದರು, ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆ' ಎಂದರು. ಫೆ.5ರಂದು ಬೆಳಿಗ್ಗೆ 9 ಗಂಟೆಗೆ ರಾಜ್ಯ ಸರ್ಕಾರಿ ನೌಕರರು ಬೈಕ್ ರ‍್ಯಾಲಿ ನಡೆಸಲಿದ್ದಾರೆ. 30 ಸ್ಥಳೀಯ ಕಲಾ ತಂಡಗಳ ಮೆರವಣಿಗೆ ಕನ್ನಡ ಸಂಘದ ಆವರಣದಿಂದ ಹೊರಟು, ತೀನ್ ಕಂದೀಲ್, ಡಾ.ಬಿ.ಆರ್.ಅಂಬೇಡ್ಕರ್ ವೃತ್ತ, ಬಸವೇಶ್ವರ ವೃತ್ತದ ಮಾರ್ಗವಾಗಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣ ತಲುಪಲಿದೆ ಎಂದು ಹೇಳಿದರು.

ವಿಶ್ವವಿದ್ಯಾಲಯದ ಆಡಳಿತ ಭವನದ ನೆಲ ಮಳಿಗೆಯಲ್ಲಿ ಮತ್ಸ್ಯ ಮೇಳ ಏರ್ಪಡಿಸಲಾಗಿದೆ. ಕೃಷಿ ಮೇಳ ಹಾಗೂ ತೋಟಗಾರಿಕೆ ಮೇಳಗಳು ನಡೆಯಲಿವೆ. ಸಂಜೆ ವೇಳೆ ಸಿಡಿಮದ್ದು ಪ್ರದರ್ಶನ ಹಾಗೂ ಪ್ರಸಿದ್ಧ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲವೆ ಎಂದು ತಿಳಿಸಿದರು. ಉತ್ಸವದ ಪ್ರಯುಕ್ತ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಮುಖ್ಯ ವೇದಿಕೆ ನಿರ್ಮಿಸಲಾಗಿದೆ. ವಿಶ್ವವಿದ್ಯಾಲಯದ ಪ್ರೇಕ್ಷಾಗೃಹ, ಜಿಲ್ಲಾ ರಂಗ ಮಂದಿರ, ಮಹಿಳಾ ಸಮಾಜ, ಮಾವಿನಕೆರೆ ಆವರಣದಲ್ಲಿ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಫೆ.6ರಂದು ಬೆಳಿಗ್ಗೆ 10 ಗಂಟೆಗೆ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ಶ್ವಾನ ಪ್ರದರ್ಶನ, ರೈತರಿಂದ ರೈತರ ಕಾರ್ಯಕ್ರಮ, ಬೆಳಿಗ್ಗೆ 10 ಗಂಟೆಗೆ ಉದ್ಯೋಗ ಮೇಳ, ಸ್ಥಳೀಯ ಕಲಾವಿದರಿಂದ ಸಂಗೀತ, ಸಂಜೆ 6.30ಕ್ಕೆ ಡಿಕೆಡಿ ತಂಡದಿಂದ ನೃತ್ಯ ಪ್ರದರ್ಶನ, ಅಳ್ವಾಸ್ ತಂಡದ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ರಾಜೇಶ ಕೃಷ್ಣನ್ ತಂಡದಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದರು. ಫೆ.7ರಂದು ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ಜಿಲ್ಲಾ ಗ್ಯಾರಂಟಿ ಮೇಳ, ಮಧ್ಯಾಹ್ನ 2 ಗಂಟೆಯಿಂದ ರೈತರಿಂದ ಕಾರ್ಯಕ್ರಮ, ಸ್ಥಳೀಯ ಕಲಾವಿದರಿಂದ ಸಂಗೀತ ಕಾರ್ಯಕ್ರಮ, ಸಂಜೆ 6 ಗಂಟೆಯಿಂದ ಸಮಾರೋಪ ಸಮಾರಂಭ ನಡೆಯಲಿದೆ. ಖ್ಯಾತ ಖಾಯಕ ವಿಜಯ ಪ್ರಕಾಶ್ ತಂಡದವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಸ್ವಚ್ಛತೆ, ಕುಡಿಯುವ ನೀರು, ಮೂಲ ಸೌಕರ್ಯ, ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ. ತಾಲ್ಲೂಕು ಕೇಂದ್ರಗಳಿಂದ ಸುಲಭವಾಗಿ ಬರಲು ಸಾಧ್ಯವಾಗುವಂತೆ ನೇರ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರಕುಮಾರ ಕಾಂದೂ ಮಾತನಾಡಿ, 'ರಾಜ್ಯದ 12 ಜಿಲ್ಲೆಗಳ ಸ್ವ–ಸಹಾಯ ಸಂಘಗಳ ಸದಸ್ಯರು ಭಾಗವಹಿಸಲಿದ್ದಾರೆ. ನೆರೆಯ ತೆಲಂಗಾಣ, ಆಂಧ್ರಪ್ರದೇಶದ ಸ್ವ–ಸಹಾಯ ಗುಂಪುಗಳಿಗೂ ಅವಕಾಶ ಮಾಡಿಕೊಡಲಾಗಿದೆ. ಕಡಿಮೆ ದರದಲ್ಲಿ ಆಹಾರ ಸಾಮಗ್ರಿಗಳ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ' ಎಂದು ಹೇಳಿದರು. ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೊಹಾಪಾತ್ರ ಮಾತನಾಡಿ, 'ಉತ್ಸವದ ಸ್ಥಳದಲ್ಲಿ 100 ಮೊಬೈಲ್ ಶೌಚಾಲಯಗಳನ್ನು ಅಳವಡಿಸಲಾಗಿದೆ. ಸಾರ್ವಜನಿಕರಿಗೆ ಅಲ್ಲಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ' ಎಂದು ತಿಳಿಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಮಾಸ್ಟರ್ ಆಫ್ ವೆಟರ್ನರಿ ಸೈನ್ಸ್ (MVSc)

ಮಾಸ್ಟರ್ ಆಫ್ ವೆಟರ್ನರಿ ಸೈನ್ಸ್ (MVSc) ಬಗ್ಗೆ ಪಶುವೈದ್ಯಕೀಯ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ (MVSc) ಪ್ರಾಣಿಗಳ ಆರೋಗ್ಯದ ಮೇಲೆ ಕೇಂದ್ರೀಕರಿಸಿದ ಎರಡು ವರ್ಷಗಳ ಮುಂದುವರಿದ ಕಾರ್ಯಕ್ರಮವಾಗಿದೆ. ಇದು ಸಾಕುಪ್ರಾಣಿಗಳು ಮತ್ತು ಕಾಡು ಪ್ರಾಣಿಗಳ ಆರೈಕೆ ಮತ್ತು ಚಿಕಿತ್ಸೆಯನ್ನು ಒಳಗೊಂಡಿದೆ. ಪ್ರಾಣಿಗಳ ಸಂತಾನೋತ್ಪತ್ತಿ, ವನ್ಯಜೀವಿ ವಿಜ್ಞಾನ ಮತ್ತು ಪಶುಸಂಗೋಪನೆಯ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಬಯಸುವವರಿಗೆ ಈ ಕಾರ್ಯಕ್ರಮ ಸೂಕ್ತವಾಗಿದೆ. ಭಾರತೀಯ ಕೃಷಿ ಸಚಿವಾಲಯವು ಈ ಕೋರ್ಸ್ ಅನ್ನು ನಿರ್ವಹಿಸುತ್ತದೆ ಮತ್ತು ಪಶುವೈದ್ಯಕೀಯ ಕಾಲೇಜುಗಳನ್ನು ಮೇಲ್ವಿಚಾರಣೆ ಮಾಡುತ್ತದೆ. ಪಠ್ಯಕ್ರಮವು ಪಶುವೈದ್ಯಕೀಯ ಪರಾವಲಂಬಿ ಶಾಸ್ತ್ರ, ರೋಗಶಾಸ್ತ್ರ, ಸಾರ್ವಜನಿಕ ಆರೋಗ್ಯ, ಸೂಕ್ಷ್ಮ ಜೀವವಿಜ್ಞಾನ, ಅಂಗರಚನಾಶಾಸ್ತ್ರ, ಶಸ್ತ್ರಚಿಕಿತ್ಸೆ ಮತ್ತು ಥೆ-ರಿಯೋಜೆನಾಲಜಿಯಂತಹ ಪ್ರಮುಖ ವಿಷಯಗಳನ್ನು ಒಳಗೊಂಡಿದೆ. ಜಾನುವಾರುಗಳ ಸಂಖ್ಯೆಯಲ್ಲಿನ ಹೆಚ್ಚಳ ಮತ್ತು ಗುಣಮಟ್ಟದ ಪ್ರಾಣಿಗಳ ಆರೈಕೆಯ ಬೇಡಿಕೆಯಿಂದಾಗಿ ಭಾರತ ಮತ್ತು ವಿಶ್ವಾದ್ಯಂತ ಪಶುವೈದ್ಯರ ಅಗತ್ಯ ಹೆಚ್ಚುತ್ತಿದೆ. ಪಶುವೈದ್ಯರು ಪ್ರಾಣಿಗಳ ಆರೋಗ್ಯವನ್ನು ಖಚಿತಪಡಿಸಿಕೊಳ್ಳುವುದಲ್ಲದೆ, ಜಾನುವಾರುಗಳನ್ನು ನಿರ್ವಹಿಸುತ್ತಾರೆ ಮತ್ತು ವೈಜ್ಞಾನಿಕ ಸಂತಾನೋತ್ಪತ್ತಿಯನ್ನು ಉತ್ತೇಜಿಸುತ್ತಾರೆ. ಅವರು ಪ್ರಾಣಿಗಳ ತಳಿಗಳನ್ನು ಸುಧಾರಿಸುವುದು, ಸಂಶೋಧನೆ ನಡೆಸುವುದು ಮತ್ತು ಪ್ರಾಣಿಗಳಲ್ಲಿ ರೋಗ ಹರಡುವಿಕೆಗೆ ಸಂಬಂಧಿಸಿದ ಕೃತಕ ಗರ್ಭಧಾರಣೆಯನ್ನು ನಿರ್ವಹಿಸುವಲ್ಲಿ ತೊಡಗಿಸಿಕೊಂಡಿದ್ದಾರೆ. ಪಠ್ಯಕ್ರಮವು ಆಯ್ಕೆ ಪ್ರಕಾರಗಳು ಮತ್ತು ಅವುಗಳ ಆನುವಂಶಿಕ ಪರಿಣಾಮಗಳು, ಹಾಗೆಯೇ ದ್ವಿಮುಖ ಆಯ್ಕೆ ಮತ್ತು ಪ್ರತಿಕ್ರಿಯೆ ಅಸಿಮ್ಮೆಟ್ರಿಯಂತಹ ವಿಷಯಗಳನ್ನು ಒಳಗೊಂಡಿದೆ. ಮಾಸ್ಟರ್ ಆಫ್ ಸೈನ್ಸ್ ಎಂವಿಎಸ್ಸಿ ಕೋರ್ಸ್‌ಗೆ ಅರ್ಹತೆ ಪಡೆಯಲು ಅಭ್ಯರ್ಥಿಗಳು ಮಾನ್ಯತೆ ಪಡೆದ ಮಂಡಳಿಯಿಂದ ವಿಜ್ಞಾನ ವಿಭಾಗದಲ್ಲಿ ಬಿ.ಎಸ್ಸಿ. / ಬಿವಿಎಸ್ಸಿ. / ಎಎಚ್‌ಬಿ ಅಥವಾ ತತ್ಸಮಾನ ಪದವಿಯನ್ನು ಪೂರ್ಣಗೊಳಿಸಿರಬೇಕು. MVSc.ಕೋರ್ಸ್‌ಗೆ ಅಗತ್ಯವಿರುವ ಕನಿಷ್ಠ ಉತ್ತೀರ್ಣ ಶೇಕಡಾವಾರು 60%. ಕೆಲವೇ ಸಂಸ್ಥೆಗಳು ಪ್ರವೇಶ ಪರೀಕ್ಷೆಗಳನ್ನು ನಡೆಸುತ್ತವೆ, ಆಸಕ್ತ ಅಭ್ಯರ್ಥಿಗಳು ಅದರಲ್ಲಿ ಉತ್ತೀರ್ಣರಾಗಬೇಕಾಗುತ್ತದೆ.

## ಇಂದು ಫೆ.5ರಂದು ಮಧ್ಯಾಹ್ನ 1 ಗಂಟೆಗೆ ರಾಯಚೂರು ಉತ್ಸವದ ಕರ್ನಾಟಕ ಸಂಘದಿಂದ ಅದ್ದೂರಿ ಮೆರವಣಿಗೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ನಿಮಿತ್ತ ಫೆ.5ರಂದು ಮಧ್ಯಾಹ್ನ 1 ಗಂಟೆಗೆ ಆರಂಭವಾಗುವ ಉತ್ಸವದ ಅದ್ದೂರಿ ಮೆರವಣಿಗೆಗೆ ಕರ್ನಾಟಕ ಸಂಘದ ಆವರಣವು ಮತ್ತು ರಾಯಚೂರು ಸಿಟಿಯು ಸಿದ್ಧವಾಗಿದೆ. ಮೆರವಣಿಗೆಯು ಬಂಗಾರ ಬಜಾರ್, ಡಾ.ಬಿ.ಆರ್.ಅಂಬೇಡ್ಕರ್ ವೃತ್ತ, ಬಸವೇಶ್ವರ ವೃತ್ತದ ಮಾರ್ಗವಾಗಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದವರೆಗೆ ಸಂಚರಿಸಲಿದೆ.**

ಮೆರವಣಿಗೆಯು ಬಸವರಾಜ ಸಿಂಧನೂರು ಅವರಿಂದ ವೀರಗಾಸೆ, ಅಂಬರೇಶ ಹಸಮಕಲ್ ಅವರಿಂದ ಹಗಲುವೇಷ, ದೇವರಾಜು ಅವರಿಂದ ಚಿಲಿಪಿಲಿ ಗೊಂಬೆ, ಹನುಮಂತ ಮಸ್ಕಿ ಅವ-ರಿಂದ ಕೀಲುಕುದುರೆ, ಲಿಂಗರಾಜ ನೀರಮಾನ್ವಿ ಅವರಿಂದ ಡೊಳ್ಳು ಕುಣಿತ, ಶಾಂತರಾಜು ಆಶಾಪೂರ ಅವರಿಂದ ಜಾಂಜ್ ಮೇಳ, ಶಿವರಾಜ ರುದ್ರಾಕ್ಷಿ ದೇವದುರ್ಗ ಅವರಿಂದ ಹಗಲುವೇಷ, ಲಂಕೆಪ್ಪ ಆಮದಿಹಾಳ ಅವರಿಂದ ಕಣಿಹಲಗೆ, ಬಸವರಾಜ ಸಿರವಾರ ಅವ-ರಿಂದ ಡೊಳ್ಳುಕುಣಿತ, ಪಂಪನಗೌಡ ಸಿಂಧನೂರು ಅವರಿಂದ ತಾಷಾರಾಂಡೋಲು, ಚಿನ್ನಪ್ಪ ಸಿಂಧನೂರು ಅವರಿಂದ ಹಗಲುವೇಷ, ಗದ್ದೆಪ್ಪ ಭಜಂತ್ರಿ ಆಮದಿಹಾಳ ಅವರಿಂದ ಶಹನಾಯಿ ವಾದನ, ತಮ್ಮಣ್ಣ ರಾಠೋಡ ದೇವದುರ್ಗ ಅವರಿಂದ ಲಂಬಾಣಿ ನೃತ್ಯ, ನಾಗೇಶ ಬೆಂಗಳೂರು ಅವರಿಂದ ಕೊಂಬುಕಹಳೆ, ಹನುಮಂತ್ರಾಯ ಅವರಿಂದ ಗೊರವ ಕುಣಿತ, ಮಾರೆಪ್ಪ ಆತಕೂರ ಅವರಿಂದ ತಮಟೆವಾದನ, ಹಣಮಂತ್ರ ಭಜಂತ್ರಿ ಅವರಿಂದ ನಾಸಿಕಡೊಳ್ಳು, ಮಹೇಶ ಕವಿತಾಳ ಅವರಿಂದ ಹಗಲುವೇಷ, ನೀಲಕಂಠ ಕಲಬುರಗಿ ಅವರಿಂದ ಗೊಂಬೆ ಕುಣಿತ, ತಿಪ್ಪೇಸ್ವಾಮಿ ಚಿತ್ರದುರ್ಗ ಅವರಿಂದ ಮಹಿಳಾ ಡೊಳ್ಳು, ಶ್ರೀಕಾಂತ ದಕ್ಷಿಣ ಕನ್ನಡ ಅವರಿಂದ ಕಂಗೀಲು ಕುಣಿತ, ಕೆ ವಸಂತಕುಮಾರ ಬಳ್ಳಾರಿ ಅವರಿಂದ ಕಹಳೆವಾದನ, ಮಹಾಂತೇಶ ಚಿತ್ರದುರ್ಗ ಅವರಿಂದ ಸೋಮನಕುಣಿತ, ಸಿ ವೀರೇಶ ವಿಜಯನಗರ ಅವರಿಂದ ನಂದಿಧ್ವಜ ಮತ್ತು ಸಮಾಳ, ವೀರಯ್ಯ ಹಿರೇಮಠ ಕೊಪ್ಪಳ ಅವರಿಂದ ಭದ್ರಕಾಳಿ ಕುಣಿತ, ಮೀನ್ಾಕ್ಷಮ ದಾವಣಗೆರೆ ಅವರಿಂದ ಮಹಿಳಾ ವೀರಗಾಸೆ, ಕಲ್ಲಪ್ಪ ಹಂಚಿನಮನಿ ಧರವಾಡ ಅವರಿಂದ ಜಗ್ಗಲಗಿ, ಶ್ರೀನಿವಾಸ ದಾವಣಗೆರೆ ಕೋಳಿಕುಣಿತ, ಮಹಾಂತೇಶ ವಾಲಿ ಕೊಣ್ಣೂರ ಕರಡಿಮಜಲು, ಮಲ್ಲಿಕಾರ್ಜುನ ಕೊಪ್ಪದ ಅವ-ರಿಂದ ಡೊಳ್ಳುಕುಣಿತ ಪ್ರಕಾರಗಳ ಮೂಲಕ ಮೆರವಣಿಗೆ ನಡೆಯಲಿದೆ.

## ಬಳಗಾನೂರಿನಲ್ಲಿ ರಾಯಚೂರು ಉತ್ಸವದ ರಥಕ್ಕೆ ಭಕ್ತಿಪೂರ್ವಕ ಸ್ವಾಗತ

❑ ನೈಜ್ಯ ದೆಸೆ ನ್ಯೂಸ್

**ಬಳಗಾನೂರು ಪಟ್ಟಣದ ಶ್ರೀ ಬಸವೇಶ್ವರ ಸಂಂ-ಯುಕ್ತ ಪ್ರೌಢಶಾಲೆಯ ಮುಂದೆ ರಾಯಚೂರು ಉತ್ಸವದ ರಥವು ಆಗಮಿಸಿದ ಸಂದರ್ಭದಲ್ಲಿ ಭಕ್ತಿಪೂರ್ವಕವಾಗಿ ಪೂಜೆ ಸಲ್ಲಿಸಿ, ಪುಷ್ಪಮಾಲೆ ಹಾಕಿ ಗೌರವಿಸಲಾಯಿತು.**

ಈ ವೇಳೆ ಶಾಲಾ ಮಕ್ಕಳು, ಶಿಕ್ಷಕರು ಹಾಗೂ ಸಿಬ್ಬಂದಿ ಉತ್ಸಾಹದಿಂದ ಭಾಗವಹಿಸಿ ಪ್ರಭಾತ್ ಪೇರಿಯ ಮೂಲಕ ರಥವನ್ನು ಮುಂದಕ್ಕೆ ಬೀಳ್ಕೊಟ್ಟು ಸಂಭ್ರಮಿಸಿದರು. ರಥದ ಆಗಮನದಿಂದ ಪಟ್ಟಣದಲ್ಲಿ ಭಕ್ತಿ, ಸಂಭ್ರಮ ಮತ್ತು ಉತ್ಸವದ ವಾತಾವರಣ ನಿರ್ಮಾಣವಾಗಿತ್ತು. ಮಕ್ಕಳು ದೇಶಭಕ್ತಿ




ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಪ್ರತಿಬಿಂಬಿಸುವ ಘೋಷಣೆಗಳನ್ನು ಕೂಗಿ, ಉತ್ಸವದ ಮಹತ್ವವನ್ನು ಸಾರಿದರು. ಸ್ಥಳೀಯ ಗಣ್ಯರು, ಪಾಲಕರು ಹಾಗೂ ಗ್ರಾಮಸ್ಥರು ಕಾರ್ಯಕ್ರಮಕ್ಕೆ ಸಾಕ್ಷಿಯಾಗಿದ್ದು, ಉತ್ಸವದ ಯಶಸ್ಸಿಗೆ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಶಾಲಾ ಮುಖ್ಯೋಪಾಧ್ಯಾಯರಾದ ಅಮರನಾಥ್ ಹಳ್ಳೂರ್ , ಶಿಕ್ಷಕರಾದ , ಶ್ರೀಮಲ್ಲಿಕಾರ್ಜುನ ಬೈರೆ ಶಿಕ್ಷಕರು, ಶ್ರೀಮತಿ ಬೌರಮ್ಮ, ಶ್ರೀಸೋಮಶೇಖರ, ಶ್ರೀವೆಂಕಟೇಶ, ಶ್ರೀಮಲ್ಲಿಕಾರ್ಜುನ್ ಜಾಲ್ವಾಡಿಗಿ, ಶ್ರೀಸಿದ್ದರಾಯ ಸರ್,ಶ್ರೀಸಂಗಪ್ಪ ಸರ್, ಶ್ರೀಬಸವರಾಜ ಯಾದಗಿರಿ ಸರ್, ಶ್ರೀಬಾಸ್ಕರ್ ಹೆಂಬ ಸರ್, ಕು!! ಪ್ರಿಯಾ0ಕಾ,ಶ್ರೀ ಟಜ ಪೈಮುದ್ದಿನ್, ಶ್ರೀಕರಿಯಪ್ಪ. ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರು ಹಾಗೂ ಗ್ರಾಮ ಪಂಚಾಯಿತಿ ಪ್ರತಿನಿಧಿಗಳು ಉಪಸ್ಥಿತರಿದ್ದು, ವಿದ್ಯಾರ್ಥಿಗಳಿಗೆ ಉತ್ಸವದ ಮಹತ್ವದ ಕು-ರಿತು ಮಾಹಿತಿ ನೀಡಿದರು. ರಾಯಚೂರು ಉತ್ಸವವು ಜಿಲ್ಲೆಯ ಸಾಂಸ್ಕೃತಿಕ ಪರಂಪರೆ ಮತ್ತು ಏಕತೆಯ ಸಂಕೇತವಾಗಿದ್ದು, ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಅವರು ಅಭಿಪ್ರಾಯಪಟ್ಟರು.

## ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌದ್ರಿ ಅವರ ಕೊಪ್ಪಳ ಜಿಲ್ಲಾ ಪ್ರವಾಸ

❑ ನೈಜ್ಯ ದೆಸೆ ನ್ಯೂಸ್

**ಕೊಪ್ಪಳ: ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಶ್ರೀಮತಿ ಡಾ. ನಾಗಲಕ್ಷ್ಮಿ ಚೌದ್ರಿ ಅವರು ಮಹಿಳೆಯರ ಹಕ್ಕುಗಳು, ಭದ್ರತೆ, ಶಿಕ್ಷಣ ಹಾಗೂ ಸಬಲೀಕರಣದ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ನಾಳೆ ಕೊಪ್ಪಳ ಜಿಲ್ಲೆಗೆ ಅಧಿಕೃತ ಪ್ರವಾಸ ಕೈಗೊಳ್ಳಲಿದ್ದಾರೆ. ಪ್ರವಾಸಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ: ಬೆಳಗ್ಗೆ 6:30ಕ್ಕೆ ಕೊಪ್ಪಳ ನಗರಕ್ಕೆ ಆಗಮಿಸುವರು.**

ಬೆಳಗ್ಗೆ 10:30ಕ್ಕೆ ಜಿಲ್ಲಾ ಆಡಳಿತ ಭವನದಲ್ಲಿ ಪಿಯು ಕಾಲೇಜು ಬಾಲಕಿಯರು ಹಾಗೂ ಪದವಿ ವಿದ್ಯಾರ್ಥಿನಿಯರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಈ ಸಂದರ್ಭದಲ್ಲಿ ವಿದ್ಯಾರ್ಥಿನಿಯ-



ರಿಗೆ ಕಾನೂನು ಅರಿವು, ಮಹಿಳಾ ಹಕ್ಕುಗಳು, ಭದ್ರತೆ ಮತ್ತು ಸ್ವಾವಲಂಬನೆ ಕು-ರಿತು ಮಾರ್ಗದರ್ಶನ ನೀಡಲಿದ್ದಾರೆ. ನಂತರ ಬೆಳಗ್ಗೆ 11:00ಕ್ಕೆ ಕೊಪ್ಪಳದಿಂದ ಪ್ರಯಾಣ ಬೆಳೆಸಿ ಮಧ್ಯಾಹ್ನ 12:45ಕ್ಕೆ ಕಾರಟ-ಗಿಗೆ ಆಗಮಿಸುವರು. ಕಾರಟಗಿ ತಾಲೂಕಿನ ಉಳಿಗನೂರು ಗ್ರಾಮಕ್ಕೆ ಭೇಟಿ ನೀಡಿ ಗ್ರಾಮೀಣ ಮಹಿಳೆಯರ ಸಮಸ್ಯೆಗಳು, ಸವಾಲುಗಳು ಹಾಗೂ ಅಗತ್ಯಗಳ ಕುರಿತು ಮಾಹಿತಿ ಸಂಗ್ರಹಿಸುವರು. ಅನಂತರ ಕಾರಟಗಿ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಮಹಿಳೆಯರಿಗೆ ಲಭ್ಯವಿರುವ ಆರೋಗ್ಯ ಸೇವೆಗಳು, ತಾಯಿ-ಮಗು ಆರೈಕೆ ಹಾಗೂ ಸೌಲಭ್ಯಗಳ ಕುರಿತು ಪರಿಶೀಲನೆ ನಡೆಸಲಿದ್ದಾರೆ.

ಬಳಿಕ ಸಂಜೆ 4:30ಕ್ಕೆ ಕಾರಟಗಿ ಪೊಲೀಸ್ ಠಾಣೆಗೆ ಭೇಟಿ ನೀಡಿ ಮಹಿಳಾ ಸುರಕ್ಷತೆ, ದೌರ್ಜನ್ಯ ತಡೆ ಕ್ರಮಗಳು ಮತ್ತು ಮಹಿಳಾ ಸಹಾಯವಾಣಿ ಸೇವೆಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಿದ್ದಾರೆ. ಸಂಜೆ 5:30ಕ್ಕೆ ಕಾರಟಗಿಯಿಂದ ಹೊರಡುವರು ಎಂದು ಪ್ರವಾಸ ಕಾರ್ಯಕ್ರಮ ತಿಳಿಸಿದೆ. ಈ ಕಾರ್ಯಕ್ರಮದ ಸಂದರ್ಭದಲ್ಲಿ ಜಿಲ್ಲಾಧಿಕಾ-ರಿಗಳು, ಪೊಲೀಸ್ ಅಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾ-ರಿಗಳು, ಶಿಕ್ಷಣ ಇಲಾಖೆ ಸಿಬ್ಬಂದಿ, ವಿವಿಧ ಮಹಿಳಾ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿರುವ ನಿರೀಕ್ಷೆಯಿದೆ. ಜಿಲ್ಲೆಯ ಮಹಿಳೆಯರು ಮತ್ತು ವಿದ್ಯಾರ್ಥಿನಿಯರು ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಳ್ಳುವಂತೆ ಮಹಿಳಾ ಆಯೋಗದ ಕಚೇರಿ ಮನವಿ ಮಾಡಿದೆ.

## ಸಿಂಧನೂರು: ಕಾಲೇಜು ವಿದ್ಯಾರ್ಥಿನಿ ರೈಲ್ವೆಗೆ ಬಿದ್ದು ಆತ್ಮಹತ್ಯೆ

❑ ನೈಜ್ಯ ದೆಸೆ ನ್ಯೂಸ್

**ಕಾಲೇಜು ವಿದ್ಯಾರ್ಥಿನಿ ರೈಲ್ವೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡ ಘಟನೆ ಸಿಂಧನೂರು ನಗರದ ರೈಲ್ವೆ ನಿಲ್ದಾಣದಲ್ಲಿ ನಡೆದಿದೆ. ನಗರದ ಪ್ರಥಮ ದರ್ಜೆಯ ಕಾಲೇಜಿನಲ್ಲಿ ಬಿಎ ಅಭ್ಯಾಸ ಮಾಡುವ ವಿದ್ಯಾರ್ಥಿನಿ ಸುಮಂಗಲಾ ನಗರದ ಅಂಬೇಡ್ಕರ್ ಬಾಲಕಿಂ-ಯರ ವಸತಿ ನಿಲಯದಲ್ಲಿ ವಸತಿ ಪಡೆದಿದ್ದಳು.**

ನನ್ನ ಆತ್ಮಹತ್ಯೆಗೆ ಯಾರು ಕಾರಣ-ರಲ್ಲ ನಾನೇ ಕಾರಣ ಎಂದು ಸಾಯುವುದಕ್ಕೂ ಮುಂಚೆ ಆಡಿಯೋ ಮಾಡಿ ಅವರ ಕುಟುಂಬದವರಿಗೆ ವಾಟ್ಸಪ್ ಮಾಡಿದ್ದಾಳೆ. ಫೆ.3ರಂದು ಸಂಜೆ 5ಕ್ಕೆ ಬೆಂಗಳೂರಿಗೆ ಹೊರಡುವ ರೈಲ್ವೆಗೆ ಬಿದ್ದು, ಸಾವನ್ನಪ್ಪಿದ್ದಾಳೆ. ವಿದ್ಯಾರ್ಥಿನಿ ಮಾನ್ವಿ ತಾಲೂಕಿನ ಸೀಕಲ್ ತಾಂಡದ ಸುಮಂಗಲಾ ತಂದೆ ಗೋಪಾಲ



ಲಂಬಾಣಿ 21 ಎಂದು ತಿಳಿದು ಬಂದಿದೆ. ಈ ಘಟನೆ ಕುರಿತು ರಾಯಚೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಡಿವೈಎಸ್ಪಿ ಚಂದ್ರಶೇಖರ ಜಿ, ನಗರ ಪೊಲೀಸ್ ಠಾಣೆಯ ವೀರಾರೆಡ್ಡಿ, ಸಿಬ್ಬಂದಿಗಳ ಜೊತೆಗೆ ಸ್ಥಳಕ್ಕೆ ಭೇಟಿ ನೀಡಿ, ಮಾಹಿತಿ ಪಡೆದುಕೊಂಡರು. ನಂತರ ಮೃತ ದೇಹವನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ದಾಖಲು ಮಾಡಿದರು. ನನ್ನ ಸಾವಿಗೆ ಯಾರು ಕಾರಣರಲ್ಲ ಎಂದು ವಿದ್ಯಾರ್ಥಿನಿ ಆಡಿಯೋ ಮಾಡಿದ್ದು, ತನಿಖೆಯ ನಂತರವಷ್ಟೆ ಕಾರಣ ಗೊತ್ತಾಗಲಿದೆ. ಸಿಂಧನೂರು ಸಹಾಯಕ ನಿರ್ದೇಶಕರು ಗ್ರೇಡ್ 1 ಸಮಾಜ ಕಲ್ಯಾಣ ಇಲಾಖೆ ವೆಂಕಟೇಶ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ಕಾರಣ ಕೇಳಿ ಡಾ.ಬಿ.ಆರ್ ಅಂಬೇಡ್ಕರ ವಸತಿ ನಿಲಯ ವಾರ್ಡನ್ ಗೆ ನೋಟಿಸ್ ನೀಡಲಾಗಿದೆ ಎಂದು ವೆಂಕಟೇಶ ಪತ್ರಿಕೆಗೆ ಮಾಹಿತಿ ನೀಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರ ಪದವಿ ವಸತಿ ನಿಲಯ ಸಮಾಜ ಕಲ್ಯಾಣ ಇಲಾಖೆ ವಾಸವಿದ್ದ ವಿದ್ಯಾರ್ಥಿನಿ ಸುಮಂಗಲಾ ಬಿಎ ಪ್ರಥಮ ವರ್ಷದಲ್ಲಿ ಅಭ್ಯಾಸ ಮಾಡುತ್ತಿದ್ದು, ಸೆಮಿಸ್ಟರ್ ಪರೀಕ್ಷೆ ಬರೆದು ವಸತಿ ನಿಲಯಕ್ಕೆ ಬಾರದೆ ಮನೆಗೆ ತೆರಳಿದ್ದಾಳೆ ಎಂದು ವಸತಿ ನಿಲಯದಲ್ಲಿರುವ ಸಹದ್ಯೋಗಿ ಇತರೆ ವಿದ್ಯಾರ್ಥಿಗಳಿಂದ ತಿಳಿದು ಬಂದಿದೆ. ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದ, ತಾಲೂಕು ಅಧಿಕಾರಿಗಳು ವರದಿ ನೀಡಿದ್ದು, ವಸತಿ ನಿಲಯ ನಿಯಮಗಳನ್ನು ವಾರ್ಡನ್ ಉಲ್ಲಂಘಿ-ಸಿದ್ದು ಕಂಡು ಬಂದರೆ ನಮ್ಮ ಮೇಲಧಿಕಾ-ರಿಗಳ ಆದೇಶ ಮೇರೆ ಮುಂದಿನ ಕ್ರಮ ಕೈಗೊಳ್ಳುವುದಾಗಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಸಿಂಧು ಹೇಳಿದರು.

## ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ

❑ ನೈಜ್ಯ ದೆಸೆ ನ್ಯೂಸ್

**ವಿದ್ಯಾರ್ಥಿಗಳು ಉತ್ತಮ ಕಲಿಕೆಯೊಂದಿಗೆ ತೇರ್ಗಡೆಯಾಗಿ ಉನ್ನತ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದರೆ ಶಾಲೆ, ಶಿಕ್ಷಕರು ಮತ್ತು ಪೋಷಕರಿಗೆ ಸಂತೋಷ. ಆದ್ದರಿಂದ ಪ್ರತಿಯೊಬ್ಬರು ಪ್ರತಿ ನಿತ್ಯ ಓದುವದು, ಪಠ್ಯವನ್ನು ಮನದಟ್ಟಾಗಿ ಕೇಳುವದು ಮುಖ್ಯ. ಸದ್ಯ ಮುಂದಿನ ವಿದ್ಯಾಭ್ಯಾಸಕ್ಕೆ ಹೋಗುವ ನಿಮ್ಮ ಮುಂದಿನ ಭವಿಷ್ಯ ಉಜ್ವಲವಾಗಲಿ ಎಂದು ಸಂಸ್ಥೆ ಉಪಾಧ್ಯಕ್ಷ ಮಲ್ಲನಗೌಡ ಓಲಿ ಹೇಳಿದರು.**

ಸ್ಥಳೀಯ ಸರ್ ಎಂ. ವಿಶ್ವೇಶ್ವರಯ್ಯ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಮಂಗಳವಾರ ಏರ್ಪಡಿಸಿದ್ದ ದ್ವಿತೀಯ ಪಿಯುಸಿ



ವಿದ್ಯಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಬಾಲಕಿಯರ ಸರ್ಕಾರಿ ಪಪೂ ಕಾಲೇಜು ಪ್ರಾಚಾರ್ಯ ಎಸ್. ಎಸ್. ಪೋರೆ ಸಮಾರಂಭವನ್ನು ಉದ್ಘಾಟಿಸಿದರು. ತಾವರಗೇರಾ ಶಿಕ್ಷಕರ ತರಬೇತಿ ಸಂಸ್ತೆಯ ಪ್ರಾಚಾರ್ಯ ರಂಗನಾಥ ಅಂಬಿಗೇರ ವಿಶೇಷ ಆಹ್ವಾನಿತರಾಗಿ ಪರೀಕ್ಷೆ ತಯಾರಿ, ಸ್ಪರ್ಧಾತ್ಮಕ ಪರೀಕ್ಷೆ, ವಿದ್ಯಾರ್ಥಿಗಳ ಜೀವನ ಮೌಲ್ಯಗಳ ಕುರಿತು ಉಪನ್ಯಾಸ ನೀಡಿದರು.

ವೇದಿಕೆಯಲ್ಲಿ ಕಳೆದ ವರ್ಷ ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕಾರ್ಯದರ್ಶಿ ನಾರಾಯಣಪ್ಪ ಐಲಿ, ಕೋಶಾಧ್ಯಕ್ಷ ನರಹರಿಯಪ್ಪ, ಶಿವನಗೌಡ ವಿಠಲಾಪೂರ, ಶಿಕ್ಷಕರಾದ ಪ್ರಕಾಸ ಮಳಗಿ, ಅಡಿವೆಪ್ಪ ಮೇಟಿ, ಸಂಗಪ್ಪ, ಪ್ರಾಚಾರ್ಯ ಲಕ್ಷ್ಮಣಸಿಂಗ್ ವಗರನಾಳ ಮತ್ತು ವೆಂಕಟೇಶ ಭೋವಿ, ಉಮಾ ಮಹೇಶ್ವರಿ ಕಾಲೇಜಿನ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

## ದಮನಿತರ ಸಮಸ್ಯೆ ಮರೆಮಾಚುವ ರಾಯಚೂರು ಉತ್ಸವ! ವಿರೋಧಿಸಿದ ಸಿಪಿಐಎಂಎಲ್ ರೆಡ್ ಸ್ಟಾರ್

❑ ನೈಜ್ಯ ದೆಸೆ ನ್ಯೂಸ್

**ಜಿಲ್ಲೆಯ ರೈತರು, ಕಾರ್ಮಿಕರು, ದಲಿತರು ಹಾಗೂ ಇತರೆ ದಮನಿತರ ಜ್ವಲಂತ ಸಮಸ್ಯೆಗಳನ್ನು ಮರೆ ಮಾಚುವ, ಶ್ರೀಮಂತರು, ಭೂಮಾಲೀಕರು, ಭಾರೀ ಗುತ್ತೇದಾರಿಕೆ ಮಾಡುವ ರಾಜಕಾರಣಿಗಳು ಶಿಕ್ಷಣ ಹಾಗೂ ಆರೋಗ್ಯ ರಂಗದ ಮಾಫಿಯಾಗಳ ಸಡಗರ ಸಂಭ್ರಮ ಮೆರೆವ ರಾಯಚೂರು ಉತ್ಸವ ಇದಾಗಿದ್ದು, ಆಚರಣೆಯನ್ನು ಸಿಪಿಐ(-ಎಂಎಲ್)ರೆಡ್ ಸ್ಟಾರ್ ತೀವ್ರವಾಗಿ ಖಂಡಿಸಿ ವಿರೋಧಿಸುತ್ತದೆ ಎಂದು ಎಂ.ಗಂಗಾಧರ ಹೇಳಿದರು.**

ನಗರದ ಪತ್ರಿಕಾ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಜಿಲ್ಲೆಯ ಬಹು ಸಂಖ್ಯಾತ ಜನರು ಕಡಿಮೆ ಇಳುವರಿ, ಕಡಿಮೆ ಕೂಲಿ ಹಾಗೂ ಕುಸಿದ ಜೀವನದಿಂದ ಹೇಗಪ್ಪ ಜೀವನ ನಡೆಸೋದು ಎಂಬ ಚಿಂತೆಯಿಂದ ಒಂದು ಕಡೆಗೆ ಒದ್ದಾಡುತಿದ್ರೆ, ರಾಯಚೂರು ಆಳುವ ವರ್ಗಗಳು ಜಿಲ್ಲಾ ಹಬ್ಬದ ಸಡಗರ ಹಾಗೂ ಸಂಭ್ರಮದಲ್ಲಿ ತೇಲಾಡುತ್ತಿವೆ. ಹೊಟ್ಟೆಗೆ ಇಟ್ಟಿಲ್ಲದವನ ಮನೆಯಲ್ಲಿ ಜುಟ್ಟಿಗೆ ಮಲ್ಲಿಗೆ ಕಟ್ಟುವ ದುರಾಡಳಿತವಾಗಿದೆಂದು ಸಿಪಿಐಎಂಎಲ್ ರೆಡ್ ಸ್ಟಾರ್ ಅಭಿಪ್ರಾಯ ಪಟ್ಟಿದೆ.

ಜಿಲ್ಲೆಯ ಬಹು ಮುಖ್ಯವಾದ ಆರ್ಥಿಕ ಶಕ್ತಿಯಾದ ರೈತ ಪರಿವರ್ತ ಹಾಗೂ ಕೃಷಿ ಕಾರ್ಮಿಕರ ಪರಿಸ್ಥಿತಿ ಬಗ್ಗೆ ಸಾಮಾನ್ಯ ಅರಿವು ಇದ್ದವರು ಯಾರು ಈ ಹಬ್ಬದಲ್ಲಿ ಭಾಗವಹಿಸಲಾರರು.

ಏಕೆಂದರೆ ಹತ್ತಿ, ಭತ್ತ, ತೊಗರಿ,




ಮೆಣಸಿನಕಾಯಿ ಇಳುವರಿ ನೆಲಕಚ್ಚಿದೆ. ಬೆಲೆಯೂ ಬಿದ್ದೋಗಿದೆ. ಸರಾಸರಿ 3 ಲಕ್ಷ 70 ಸಾವಿರ ಎಕರೆ ಮುಂಗಾರು ಭತ್ತ ಶೇ. 70ರಷ್ಟು ಇಳುವರಿ ಕುಸಿದಿದೆ. ಸಿಂಧನೂರು, ಮಾನ್ವಿ ಹಾಗೂ ರಾಯಚೂರು ತಾಲೂಕಿನ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ 15 ಲಕ್ಷ ಜನರಿಗೆ ಹಿಂಗಾರು ಬೆಳೆಯೇ ಇಲ್ಲ. ಗೇಟ್ ದುರಸ್ತಿ ನಿಮಿತ್ಯ ಹಿಂಗಾರಿ ನೀರು ನಿಲ್ಲಿಸಲಾಗಿದೆ. ಮುಂಗಾರು ಮಣ್ಣುಪಾಲಾಯಿತು ಹಿಂಗಾರು ಇಲ್ಲವೇ ಇಲ್ಲ. ಅಚ್ಚುಕಟ್ಟು ಪ್ರದೇಶದ ಶೇ.30ರಷ್ಟು ಜನರು ಗುಳೆ ಹೊರಟಿದ್ದಾರೆ. ಇದರ ಅರಿವು ಇಲ್ಲದೆ ಕಳೆದ ತಿಂಗಳು ಸಿಂಧನೂರಿನಲ್ಲಿ ಅಂಬಾದೇವಿಯ ಅಂಬೋತ್ಸವ ಆಚರಿಸಿದರು. ಈಗ ರಾಯಚೂರು ಉತ್ಸವದಲ್ಲಿ ತೇಲಾಡುತ್ತಿದ್ದಾರೆ.

"ರಾಯಚೂರು ಉತ್ಸವ: ಮದು ಮಕ್ಕಳಿಲ್ಲದ ಮದುವೆ" ಜಿಲ್ಲೆಯ ಕೃಷಿ ಬಿಕ್ಕಟ್ಟಿನಿಂದ ಕೆಲಸ ಇಲ್ಲದಂತಾಗಿ, ಲಕ್ಷ ಲಕ್ಷ ಜನರು, ಕೃಷಿ ಕಾರ್ಮಿಕರು ಮುಂದಿನ 6 ತಿಂಗಳ ಜೀವನದ ಬಗ್ಗೆ ಚಿಂತಿಸುತ್ತಲೇ ಮನೆಗೊಬ್ಬರಂತೆ ಮುಂಬೈ, ಗೋವಾ, ಬೆಂಗಳೂರಿಗೆ ಗುಳೆ ಹೊರಟಿದ್ದಾರೆ.

ಜಿಲ್ಲೆಯಲ್ಲಿ ಗುತ್ತಿಗೆ ಹಾಗೂ ದಿನಗೂಲಿ ಆಧಾರಿತ ಕಾರ್ಮಿಕ ಹಾಗೂ ಸಣ್ಣ ನೌಕರರಿಗೆ ಸರಾಸರಿ 6 ತಿಂಗಳಿನಿಂದ ಸಂಬಳ ಪಾವತಿ ಮಾಡಿಲ್ಲ. ಸಂಬಳ ಕೇಳಿದರೆ ಕೆಲಸವಿಲ್ಲ. ತುಂಗಭದ್ರಾ, ಶಕ್ತಿನಗರ, ಹಟ್ಟಿ ಸೇರಿದಂತೆ ಪೌರಸೇವೆ, ಆರೋಗ್ಯ, ಶಿಕ್ಷಣ ಹಾಗೂ ಪಂಚಾಯತ್ ರಾಜ್ಯ ಇಲಾಖೆಗಳಲ್ಲಿ ದುಡಿದ ಕೂಲಿ ಕೊಡಿ ಎಂದು ನಡೆಯುತ್ತಿರುವ ಹೋರಾಟಗಳಿಗೆ ಸರ್ಕಾರ ಸ್ಪಂದಿಸುತ್ತಿಲ್ಲ. ದುಡಿದ ಕೂಲಿ ಕೊಡದ ಜಿಲ್ಲೆಯಲ್ಲಿ ಜಿಲ್ಲಾ ಉತ್ಸವ ಎಂದರೆ ಇದಕ್ಕಿಂತ ನಾಚಿಕೆಗೇಡು ಸಂಗತಿ ಮತ್ತೊಂದಿಲ್ಲ.

"ಎಡದೊರೆ ನಾಡಲ್ಲಿ ಕುಡಿಯಲು ನೀರಿಲ್ಲ ದೊರೆಗಳೇ" ಜಿಲ್ಲೆಯಲ್ಲಿ ಅಂತರ್ಜಲ ಖುಷಿ ಇದೆ ಕುಡಿಯುವ ನೀರು ಹಾಗೂ ಕೃಷಿ ನೀರಾವರಿಯ ಎಲ್ಲಾ ಕಾಮಗಾರಿಗಳು ಅವ್ಯವಹಾರಕ್ಕೆ ಬಲಿಯಾಗಿ ಹೋಗಿವೆ. ಜಿಲ್ಲೆಯ 60 ಗ್ರಾಮಗಳು ಕುಡಿಯುವ ನೀರಿನ ವ್ಯವಸ್ಥೆಯಿಂದ ವಂಚಿತವಾಗಿವೆ.

ಆರ್ ಓ ಪ್ಲಾಂಟ್ ಗಳು ಶೇ.70ರಷ್ಟು ಕೆಟ್ಟು ನಿಂತಿವೆ. ಆರ್ಸೇನಿಕ್ ಈಗಾಗಲೇ ಎಲ್ಲಾ ಕಡೆಗೆ ಅರಡಿಕೊಂಡಿದೆ. ಎಡದೊರೆ ನಾಡಿನ ಹಬ್ಬಕ್ಕೆ ಬರುವ ಅರಸರಿಗೆ, ಕಲಾವಿದರಿಗೆ, ಕುಣಿಯುವವರಿಗೆ, ಬಾರಿಸುವವರಿಗೆ, ನಗೆಸುವವರಿಗೆ ವಿನಂತಿ ಎಂದರೆ, ಎರಡು ನದಿ, ಎರಡು ನಾಲೆ, ಸಾವಿರಕ್ಕೂ ಹೆಚ್ಚು ಕೆರೆಕುಂಟೆಗಳು ಹಾಗೂ ಹತ್ತಕ್ಕೂ ಹೆಚ್ಚು ಏತ ನೀರಾವರಿ ಯೋಜನೆಗಳಿರುವ ಜಿಲ್ಲೆ ರಾಯಚೂರು. ಆದರೆ, ಒಟ್ಟು ನೀರಾವರಿಗೊಳಗಾದ ಪ್ರದೇಶ ಕೇವಲ ಶೇ. 42ರಷ್ಟು ಮಾತ್ರ ಆಗಿದೆ. ಶೇ 38ರಷ್ಟು ಸರ್ಕಾರಿ ಶಾಖೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಅಂಬೋತ್ಸವ ಆಚರಿಸಿದ ಸಿಂಧನೂರಿನಲ್ಲಿ ವಾರಕ್ಕೊಮ್ಮೆ ಕುಡಿಯುವ ನೀರು ಬಿಡಲಾಗುತ್ತಿದೆ. ಅಂಗೈಯಲ್ಲಿ ತುಪ್ಪ ಇದ್ದರೂ, ಉಣುವ ಉಪ್ಪಿಗೂ ಗತಿ ಇಲ್ಲದ ಸ್ಥಿತಿ ಜಿಲ್ಲೆಯಲ್ಲಿದೆ. ನೇಕಾರನ ಹೆಂಡತಿ ಬತ್ತಲೆ ಎಂಬಂತಾಗಿದೆ! ಜಿಲ್ಲೆಯಲ್ಲಿ ಐದು ಸಾವಿರ ಕೋಟಿ ಮೊತ್ತದ ನೀರಾವರಿ ಯೋಜನೆಗಳು ಭ್ರಷ್ಟಾಚಾರಕ್ಕೆ ಬಲಿಯಾಗಿವೆ.

ದಿವಾಳಿಯಾದ ಸರ್ಕಾರಿ ಆಸ್ಪತ್ರೆಗಳು: ಕಸಾಯಿ ಖಾನೆಯಾದ ಖಾಸಗಿ ನರ್ಸಿಂಗ್ ಹೋಮ್ ಗಳು! ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಮೆಡಿಕಲ್ ಕಾಲೇಜು, ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಇದ್ದರೂ, ನೂರಕ್ಕೆ 80ರಷ್ಟು ಗುರುತರ ಕಾಯಿಲೆ ಹೊಂದಿದ ರೋಗಿಗಳು ಹೈದರಾಬಾದ್, ಬೆಂಗಳೂರು, ಹಾಗೂ ಬಾಗಲಕೋಟೆಗೆ ಹೋಗುತ್ತಿದ್ದಾರೆ. ಬಹುತೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರಿಲ್ಲ. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರತ ವೈದ್ಯರು ಹಾಗೂ ತಕ್ಕ ಔಷಧಿ ಸಿಗುವುದಿಲ್ಲ. ಅನಿವಾರ್ಯವಾಗಿ ಜೀವ ಕೈಯಲ್ಲಿ ಹಿಡಿದುಕೊಂಡು ಹಳ್ಳಿಯ ಬಡವರು ಖಾಸಗಿ ದವಖಾನೆಗಳಿಗೆ ಹೋಗುತ್ತಾರೆ. ಬಹುತೇಕ ಖಾಸಗಿ ನರ್ಸಿಂಗ್ ಹೋಮ್ ಗಳನ್ನು ಸರ್ಕಾರಿ ವೈದ್ಯರೇ ನಡೆಸುತ್ತಾರೆ. ಇಲ್ಲಿ ಬಡವರನ್ನು ಮನಸೋ ಇಚ್ಛೆ ಸುಲಿದು ಕಳಿಸುತ್ತಾರೆ. ಹಣ ಹೋಯ್ತು! ಹೆಣ ಹೋಯ್ತು! ಗುಣ ಹೋಯ್ತು! ಎಂದು ಕಣ್ಣೀರಾಕುವ ಬಡಜನರ ಬಗ್ಗೆ, ಅವರ ಸಾವು ನೋವುಗಳ ಬಗ್ಗೆ ಕೇಳುವವರಿಲ್ಲ. ಹಾಗಾಗಿ ಈ ರಾಯಚೂರು ಹಬ್ಬ, ಇಲ್ಲಿನ ರೈತರು ಕಾರ್ಮಿಕರು ಹಾಗೂ ದಲಿತ ದಮನಿತರ ಜೀವನ ಸ್ಥಿತಿಗತಿಯನ್ನು ಅಪಹಾಸ್ಯ ಮಾಡುವಂತದ್ದಾಗಿದೆ. ಇದರಿಂದಾಗಿ ಆದ್ದರಿಂದಲೇ ನಾವು ಇದನ್ನು ಸಂಪೂರ್ಣವಾಗಿ ವಿರೋಧಿಸುತ್ತಿದ್ದೇವೆ ಎಂದರು. ಈ ಸಂದರ್ಭದಲ್ಲಿ: ರಾಜ್ಯ ಸಮಿತಿ ಸದಸ್ಯರಾದ ಆದ-'ೀಶ ನಗನೂರ, ಹೆಚ್.ಆರ್.ಹೊಸಮನಿ, ಮಾರುತಿ ಜಿನ್ನಾಪುರ, ಮುದಿಯಪ್ಪ, ಹನುಮಂತ ಗೋಡಿಹಾಳ, ಚಿದಾನಂದ, ಹುಲುಗಪ್ಪ ಬಳ್ಳಾರಿ, ವೆಂಕಟೇಶ್ ನಾಯಕ, ಧರಗಯ್ಯ, ಸೇರಿದಂತೆ ಇತರರು ಇದ್ದರು.